

## ಸರ್ವಮೂಲ ಸಂದೇಶ

ಜ್ಞಾನಾನಂದಾತ್ಮಕೇ ವಿಷ್ಣೋ ಶಿಂಶುಮಾರವಪುಷ್ಯಥ।
ಊರ್ಧ್ವಲೋಕೇಷು ಸಂವ್ಯಾಪ್ತ ಆದಿತ್ಯಾದ್ಯಾಃ ಸಮಾಶ್ರಿತಾಃ॥

ಭಾಗವತ ತಾ.ನಿ. 5-20-37

ಮೇಲಿನ ಲೋಕಗಳನ್ನು ವ್ಯಾಪಿಸಿರುವ ಜ್ಞಾನಾನಂದಸ್ವರೂಪದಿಂದ ಕೂಡಿರುವ ಶ್ರೀ ಮಹಾವಿಷ್ಣುವಿನ ಚೇಳಿನ ಆಕಾರದ "ಶಿಂಶುಮಾರ" ರೂಪವನ್ನು ಆಧರಿಸಿಯೇ ಆದಿತ್ಯಾದಿ ಗ್ರಹಗಳು ಇರುವುದು. ಅದಕ್ಕಾಗಿಯೇ "ಸಕಲಗ್ರಹಬಲನೀನೇ ಸರಸಿಜಾಕ್ಷ"........ ಎಂದು ದಾಸರು ಸ್ತುತಿಸಿರುತ್ತಾರೆ.

**–ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದರು**

ಸಂಪುಟ–೭ ಸಂಚಿಕೆ–೪ ಸರ್ವಜಿತ್ ಸಂ॥ ಫಾಲ್ಗುಣ–ಚೈತ್ರ ಏಪ್ರಿಲ್ ೨೦೦೮

ಸಂಸ್ಥಾಪಕರು:

ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು

ಶ್ರೀವಿದ್ಯಾಮಾನ್ಯ ಪ್ರಕಾಶನ

ಶ್ರೀಮದ್ ಹೃಷೀಕೇಶ ತೀರ್ಥ ಸ್ವಾಮಿಯರ್ ಸ್ಮಾರಕ ಟ್ರಸ್ಟ್ (ರಿ.)

ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

## ವಿಷಯಾನುಕ್ರಮಣಿಕೆ


| | | |
|---|---|---|
| ಉದ್ಧವಗೀತೆ | ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು | 1 |
| ಮಧ್ವಮತದ ವೈಶಿಷ್ಟ್ಯಗಳು | ಶ್ರೀ ಶ್ರೀ ವಿದ್ಯಾಮಾನ್ಯತೀರ್ಥಶ್ರೀಪಾದರು | 5 |
| ವಿದುರ ನೀತಿ | ಶ್ರೀ ಶ್ರೀ ವಿಶ್ವಪ್ರಿಯತೀರ್ಥ ಶ್ರೀಪಾದರು | 8 |
| ಸಾಧನೆಗೊಂದು ಮೆರುಗು | ವಿ॥ ಸಗ್ರಿ ರಾಘವೇಂದ್ರ ಉಪಾಧ್ಯಾಯ | 12 |
| ಶ್ರೀ ಹರಿಭಕ್ತಿಸಾರ | ವಿ॥ ಹಯವದನ ಪುರಾಣಿಕ | 16 |
| ಉಪನಿಷತ್ ಸಂದೇಶ | ಡಾ॥ ಎನ್. ವೆಂಕಟೇಶಾಚಾರ್ಯ | 19 |
| ಮುಖಪುಟ ಲೇಖನ | | 21 |
| ಶ್ರೀ ಮಹಾಭಾರತ | ವಿ॥ ರಾಮವಿಟ್ಠಲಾಚಾರ್ಯ | 22 |
| ತೈತ್ತಿರಿಯೋಪನಿಷತ್ | | 24 |
| ಮಧ್ವಚರಿತ್ರೆ | ವಿ॥ ಅನಂತಕೃಷ್ಣಾಚಾರ್ಯ | 25 |
| ವಿಷ್ಣುಪುರಾಣ | | 28 |
| ಗುರುನಮನ | | 33 |
| ಆರಾಧನಾಕಾರ್ಯಕ್ರಮಗಳು | | 35 |


**ಪ್ರಕಾಶಕರು**
ಶ್ರೀ ಶಿಬರೂರು ವೇದವ್ಯಾಸ ತಂತ್ರಿ, ಉಡುಪಿ

**ಪ್ರಧಾನ ಸಂಪಾದಕರು**
ವಿ॥ಸಗ್ರಿ ರಾಘವೇಂದ್ರ ಉಪಾಧ್ಯಾಯ, ಉಡುಪಿ

**ಸಲಹಾ ಮಂಡಳಿ:**
ವಿ॥ಬಲರಾಮ ಭಟ್ಟ, ಉಡುಪಿ
ಶ್ರೀ ರಘುಪತಿ ತಂತ್ರಿ, ಬೆಂಗಳೂರು
ಶ್ರೀ ಗಿರೀಶ ಉಪಾಧ್ಯಾಯ, ಕುತ್ಯಾರು

**ಅಕ್ಷರ ವಿನ್ಯಾಸ ಮತ್ತು ಜೋಡಣೆ:** ಶ್ರೀಮತಿ ಸ್ವಾತಿ ಭಾಗವತ್

**ಬಿಡಿಸಂಚಿಕೆ** : ರೂ. 8.00 **ವಾರ್ಷಿಕಚಂದಾ** : ರೂ. 90.00
**15 ವರ್ಷಕ್ಕೆ** : ರೂ. 1,250.00 **ಸದಸ್ಯರು** : ರೂ. 2,250.00
**ಪೋಷಕರು : ರೂ.** 3,000.00

# ಉದ್ಧವಗೀತೆ



–ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು
ಶ್ರೀ ಪಲಿಮಾರು ಮಠ, ಉಡುಪಿ

ಜನೇಷು ದಹ್ಯಮಾನೇಷು ಕಾಮಲೋಭದವಾಗ್ನಿನಾ।
ನ ತಪ್ಯಸೇಽಗ್ನಿನಾ ಮುಕ್ತೋ ಗಂಗಾಂಭಸ್ಥ ಇವ ದ್ವಿಪಃ॥
ತ್ವಂ ಹಿ ನಃ ಪೃಚ್ಛತಾಂ ಬ್ರಹ್ಮನ್ನಾತ್ಮನ್ಯಾಂದಕಾರಣಂ।
ಬ್ರೂಹಿ ಸ್ಪರ್ಶವಿಹೀನಸ್ಯ ಭವತಃ ಕೇವಲಾತ್ಮನಃ॥

ಯದು ರಾಜ ಅವಧೂತನಾದ ಮಹಾಜ್ಞಾನಿಯನ್ನು ಸ್ತುತಿಸುವ ಪರಿ ಅಪೂರ್ವ. ಯಾವುದೋ ಲೌಕಿಕ ಕ್ಷುಲ್ಲಕ ಆಸೆ–ಆಮಿಷಗಳ ಕಾರಣಕ್ಕಾಗಿ ಸ್ತುತಿಸುವುದಲ್ಲ. ಕೇವಲ ಭಗವಂತನ, ಅತೀಂದ್ರಿಯ ವಸ್ತುಗಳ ಜ್ಞಾನಕ್ಕಾಗಿಯೇ ಯದು ರಾಜರ ಪ್ರಾರ್ಥನೆಯ ಸ್ತೋತ್ರ ಅವಧೂತರಿಗಾಗಿ. ಉಪದೇಶ ಮಾಡಬೇಕಾದವ ಶಾಂತನಾಗಿರಬೇಕು. ಒಳಗಿನಿಂದ ಬೆಂದವನಾದರೆ ಆ ನೋವು ಖಂಡಿತ ಉಪದೇಶಕ್ಕೆ ಅಡ್ಡಿಯಾಗುವುದರಲ್ಲಿ ಸಂದೇಹವಿಲ್ಲ. ಒಳಗೆ ಬೇಯುವ ಬಗೆಯಾದರೂ ಯಾವುದು? ಬೆಂಕಿ ತಾನೇ ಬೇಯಿಸುವ ಸಾಧನ. ಹೊರಗೆ ಬೇಯುವಂತೆ ಮಾಡುವುದು ಒಂದು ಬೆಂಕಿಯಾದರೆ ಒಳಗಿನ ಉರಿಗೆ ಕಾರಣವಾದ ಬೆಂಕಿ ಇನ್ನೊಂದು. ಹೊರಗಿನ ಬೆಂಕಿಯ ಉರಿ ಸಹ್ಯ. ಆದರೆ ಒಳಗಿನ ಬೆಂಕಿಯ ಉರಿ ಹೇಳತೀರದು. ಅದು ಯಾವುದು ಒಳಗಿನ ಬೆಂಕಿ? **"ಕಾಮ ಲೋಭ ದವಾಗ್ನಿನಾ"** ಬರೀ ಬೆಂಕಿಯಲ್ಲ, ಅದು ದವಾಗ್ನಿ ಅಂದರೆ ಕಾಡ್ಗಿಚ್ಚು. ಎರಡು ಮರಗಳಿಗೆ ತಿಕ್ಕಾಟವಾದಾಗ ಸಂಘರ್ಷದಿಂದ ಉಂಟಾದ ಬೆಂಕಿ. ಇದನ್ನು ನಂದಿಸಲು ಸಾಧ್ಯವೇ? ಅತ್ಯಸಾಧ್ಯ. ಮರದಿಂದ ಮರಕ್ಕೆ ಬೆಂಕಿ ಹತ್ತಿಕೊಂಡು ಕಾಡಿಡೀ ಉರಿಯುತ್ತದೆ. ಈ ದವಾಗ್ನಿಗೆ ಇಡೀ ಕಾಡೇ ಆಹುತಿಯಾಗುತ್ತದೆ. ಒಳಗಿನ ಕಾಮವೇ ಒಳಗಿನ ಕಾಡ್ಗಿಚ್ಚು. ಕಾಡ್ಗಿಚ್ಚಿಗಿಂತಲೂ ಅಪಾಯ ಕಾಮದ ಬೆಂಕಿ. ಕಾಡ್ಗಿಚ್ಚಿಗೆ ಕಾಡೇ ಆಹಾರ. ಕಾಡು ಖಾಲಿಯಾದರೆ ಆಹಾರವಿಲ್ಲದೆ ಕಾಡ್ಗಿಚ್ಚು ಶಾಂತವಾಗುತ್ತದೆ. ಆದರೆ ಕಾಮ ಎಂಬ ಅಗ್ನಿ ಶ್ರೀಕೃಷ್ಣನ ಭಾಷೆಯಲ್ಲಿ ನಿತ್ಯ ವೈರಿ. "ನಿತ್ಯವೈರಿಣಾ

**ನಂಬಿದವರ ಸಲಹುವವರಲ್ಲಿ ಶ್ರೀಕೃಷ್ಣನೇ ಅಗ್ರಗಣ್ಯ**



ಕಾಮರೂಪೇಣ" ಎಂದು ಹೇಳಿದ್ದಾನೆ ಕೃಷ್ಣ. ಶ್ರೀಕೃಷ್ಣ ಹೇಳುತ್ತಾನೆ "ದುಷ್ಪೂರೇಣ ಅನಲೇನಚ" ಅನಲ ಅಂದರೆ ಅಲಂ ಬುದ್ಧಿ ಇಲ್ಲದೇ ಇದ್ದದ್ದು. ಅಂದರೆ ಸಾಕು ಎಂದು ಎಂದೆಂದೂ ಹೇಳುವ ಸ್ವಭಾವ ಕಾಮ ಎಂಬ ಅಗ್ನಿಗೆ ಇಲ್ಲ. ಕಾಮದ ಹೊಟ್ಟೆ ದೊಡ್ಡದು. ಅದನ್ನು ಪೂರೈಸಲು, ತುಂಬಿಸಲು ಯಾರಿಂದಲೂ ಸಾಧ್ಯವಿಲ್ಲ. ಅದಕ್ಕೆಂದೇ ಕಾಮವನ್ನು ದುಷ್ಪೂರೇಣ ಎಂದು ಶ್ರೀಕೃಷ್ಣ ವಿವರಿಸಿದ. ಯಾಕೆ ಕಾಮದ ಹೊಟ್ಟೆ ತುಂಬಿಸಲು ಸಾಧ್ಯವಿಲ್ಲ? ಶ್ರೀಕೃಷ್ಣ ಹೇಳುತ್ತಾನೆ "ಮಹಾಶನಃ" ಅಶನ ಎಂದರೆ ಭೋಗ್ಯವಸ್ತುಗಳು ಎಂದು ಅರ್ಥ. ಮಹಾಶನ ಅಂದರೆ ಅಲ್ಪ ಸ್ವಲ್ಪ ಭೋಗದಿಂದ ಹಿಂಜರಿಯುವಂಥದ್ದಲ್ಲ. ಇಷ್ಟು ಸಿಕ್ಕದರೆ ಮತ್ತಷ್ಟು ಆಸೆ. ಇಂತಹ ಕಾಮವನ್ನು ಬಯಸಿದ್ದನ್ನು ಕೊಟ್ಟು ತಣಿಸಲು ಯತ್ನಿಸುವಂತದ್ದು ನಾವೇ ಇಲ್ಲದೇ ಕಡಲನ್ನು ದಾಟುವ ಯತ್ನವೇ ಸರಿ. ಕಾಮ ಕೇಳಿದ್ದನ್ನು ಕೊಡಬೇಕಿನ್ನುವವರಿದ್ದಾರೆ. ಕೇಳಿದಷ್ಟು ಕೊಟ್ಟು ಆಸೆಯ ಮನಸ್ಸನ್ನು ತಣಿಸಬಹುದು ಎನ್ನುವವರಿದ್ದಾರೆ. ಅದಕ್ಕೆ ಉದಾಹರಣೆ ಕೊಡುವುದು ಉಂಟು. ಯಾವುದರಿಂದಲೂ ತೃಪ್ತಿ ಪಡಿಸಲು ಸಾಧ್ಯವಿಲ್ಲ. ಹೊಟ್ಟೆ ತುಂಬಾ ಊಟಹಾಕಿ ಆಸೆಯನ್ನು ತಣಿಸಬಹುದು ಎಂದು ಉದಾಹರಣೆ ಕೊಡುತ್ತಾರೆ. ಆದರೆ ಹೊಟ್ಟೆ ತುಂಬಾ ಉಂಡವರ ಹತ್ತಿರ ಕೇಳಿ? ಸಾಕಾ, ಬೇಕಾ? ಎಂದು ಕೇಳಿ, ಉತ್ತರ ಏನು ಹೇಳುತ್ತಾನೆ ಗೊತ್ತೇ? ಸಾಕು ಎಂದಿಷ್ಟೇ ಹೇಳುವುದಿಲ್ಲ "ಸಧ್ಯಕ್ಕೆ ಸಾಕು ಸಾಯಂಕಾಲಕ್ಕೆ ಹಾಕಿ ಎನ್ನುತ್ತಾನೆ" ಸಾಕು, ಸಾಕೋ ಸಾಕು ಎಂದು ಹೇಳುವಂತೆಯೇ ಇಲ್ಲ ಇದು ಕಾಮದ ಸ್ವಭಾವ   ಭಾಗವತದಲ್ಲಿ ಭಿಕ್ಷುಗೀತೆಯಲ್ಲಿ

ಅರ್ಥಸ್ಯ ಸಾಧನೇ ಸಿದ್ಧೇ ಉತ್ಕರ್ಷೇ ರಕ್ಷಣೇ ವ್ಯಯೇ
ನಾಶೋಪಭೋಗ ಆಯಾಸಃ ತ್ರಾಸಃ ಚಿಂತಾ ಭ್ರಮೋ ನೃಣಾಂ

ಹೀಗೆ ಆಸೆಯ ದುಡ್ಡಿನ ದುರಂತವನ್ನು ವರ್ಣಿಸಿದ್ದಾರೆ. ಸಾಧನೇ ಆಯಾಸಃ ದುಡ್ಡನ್ನು ಸಂಪಾಧನೆ ಮಾಡುವುದಕ್ಕೇ ಎಷ್ಟು ಆಯಾಸ. ಸುಲಭದಲ್ಲಿ ದುಡ್ಡು ಮಾಡಲು ಸಾಧ್ಯನೇ ಸಂಪಾದಿತವಾದ ಸಂಪತ್ತನ್ನು ಉತ್ಕರ್ಷೇ ಅಂದರೆ ಬೆಳೆಸಲು ಹಾಗೂ ಉಳಿಸಲು (ಆರ್ಥಿಕ ಮೂಲಗಳು) ಅದೆಷ್ಟು ಸಮಸ್ಯೆ. ಖರ್ಚು ಮಾಡುವುದಂತೂ ಮಹಾಚಿಂತೆ. ಭೋಗಿಸುವಾಗ ದುಡ್ಡು ಬುದ್ಧಿಭ್ರಂಶಕ್ಕೆ ಕಾರಣ.

**ಇದು ವೇದ–ಮಹಾಭಾರತ ಮುಂತಾದ ಇತಿಹಾಸ–ಪುರಾಣಗಳ ಸಾರ.**

“ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ನಿಗೃಹ್ಯತೆ” ಎಂದು ಗೀತೆ ಹೇಳಿದಂತೆ ನಿರಂತರ ಅಭ್ಯಾಸ, ವಿಷಯದ ವಿರಕ್ತಿ ಈ ಎರಡರಿಂದಲೇ ಕಾಮವನ್ನು ಗೆಲ್ಲಬೇಕು. ಏಕಾದಶಿಯಂತಹ ನಿರ್ಜಲ, ನಿರಶನ, ಉಪವಾಸಗಳು ಹಾಗೂ ನಿರಂತರ ಶ್ರೀಹರಿವಾಯುಗಳ ಗರಿಮೆ–ಹಿರಿಮೆ ಸರ್ವೋತ್ತಮತ್ವಗಳನ್ನು ಸಾರುವ ಸಚ್ಛಾಸ್ತ್ರಗಳ ಸದಾ ಚಿಂತನ ಮಂಥನೆಯ ಜಾಗರಣೆಯ ಅಭ್ಯಾಸವು ಕಾಮನಿಗ್ರಹಕ್ಕೆ ಮುಖ್ಯಕಾರಣ. ಮನಸ್ಸನ್ನು ಬೇರೆ ಕಡೆ ಹರಿಯ ಕೊಡದೆ ಶ್ರೀಹರಿಯಲ್ಲಿಯೇ ನೆಲೆ ನಿಲ್ಲುವಂತೆ ಮಾಡಲು ಈ ಅಭ್ಯಾಸ ಅತ್ಯಗತ್ಯ. ಅದೇ ರೀತಿ ವೈರಾಗ್ಯವು ಕಾಮಾಗ್ನಿಯನ್ನು ತಣಿಸಲು ಮುಖ್ಯ ಕಾರಣ. ವಿಷಯ ವೈರಾಗ್ಯದ ಮೂಲಯಾವುದು? “ವಿಷಯವನ್ನು ಸುಳ್ಳು” ಎಂದು ಹೇಳಿ ವಿಷಯ ವೈರಾಗ್ಯ ಸಂಪಾದಿಸಬಹುದು ಎನ್ನುವವರು ಇಲ್ಲವೆಂದಲ್ಲ. “ವಿಷಯವನ್ನು ಸುಳ್ಳು” ಎಂದು ಸುಳ್ಳು ಹೇಳಿದರೆ ಅದರಿಂದ ಅನರ್ಥ ದುಃಖವೇ ಸರಿ. ಸುಳ್ಳು ಸುಳ್ಳು ಹೇಳಿ ಸತ್ಯವಾದ ಮೋಕ್ಷಕ್ಕೆ ದಾರಿ ಕಾಣುವ ಸಾಧನೆ ಅದೆಷ್ಟು ಸರಿ. ಸಾಧಕರಿಗೆ ಸಿದ್ದಿಸುವ ಪಥ ಇದಲ್ಲ. ಹಾಗಾದರೆ ವೈರಾಗ್ಯ ಹೇಗೆ? ವಿಷಯ ಪದಾರ್ಥದಲ್ಲಿರುವ ದೋಷಗಳನ್ನು ಅನ್ವೇಷಣೆ ಮಾಡಬೇಕು. ಯಾವುದು ದುಷ್ಟ ಅಲ್ಲ, ಹೌದು ಅನ್ನುವುದು ತಿಳುವಳಿಕೆಗೆ ಬರುತ್ತದೆ.

ಆಬ್ರಹ್ಮಸ್ತಂಬಪರ್ಯಂತಂ ಅಸಾರಂಚಾಪಿ ಅನಿತ್ಯಕಂ।
ವಿಜ್ಞಾಯ ಜಾತವೈರಾಗ್ಯಃ ವಿಷ್ಣುಪಾದೈಕಸಂಶ್ರಯಃ॥

ಹೀಗೆ ಒಂದು ಹುಲ್ಲು ಕಡ್ಡಿಯಿಂದ ಪ್ರಾರಂಭ ಮಾಡಿ ಚತುರ್ಮುಖ ಬ್ರಹ್ಮದೇವರ ತನಕ ಪ್ರತಿಯೊಂದು ಪದಾರ್ಥಗಳಲ್ಲಿಯೂ ಅಸಾರತ್ವ, ಅಸ್ವಾತಂತ್ರ್ಯವನ್ನು ಮತ್ತೆ ಮತ್ತೆ ಮನನೆಯಿಂದ ಮನಗಾಣಬೇಕು. ಅವಧೂತರ ಗುಟ್ಟೇ ಇದು. ಹಾಗಾಗಿ ಅವಧೂತರು ಅಭ್ಯಾಸದಿಂದ ಸಿದ್ದಿಯನ್ನು ಪಡೆದ, ಜೀವನ್ಮುಕ್ತತೆಯಿಂದ ವಿರಕ್ತತೆಯ ಪರಾಕಾಷ್ಟೆಯನ್ನು ಕಂಡ ಮಹಾತ್ಮರು. ಹೀಗೆ ಕಾಮವನ್ನು ಗೆದ್ದ ಮಹಾತ್ಮ ಅವಧೂತ ಹಾಗಾಗಿ ಕಾಮ ಲೋಭಗಳ ದವ ದಾಹ ರಹಿತನಾದ ಅವಧೂತನೇ ನಿಜವಾದ ಉಪದೇಶ ಮಾಡುವ ಮಹಾಧಿಕಾರಿ ಎನ್ನುತ್ತಾರೆ ಯದು ಮಹಾರಾಜರು.

***********************

ಆತನನ್ನು ನಂಬಿ ಕೆಟ್ಟವರಿಲ್ಲ.



**ಯೋಗದೀಪಿಕಾ ವಿದ್ಯಾಪೀಠ– 2008–09ರ ಪ್ರವೇಶಕ್ಕೆ ಅರ್ಜಿ ಆಹ್ವಾನ**

ತ್ರೈಲೋಕ್ಯ ಗುರುಗಳಾದ ಶ್ರೀ ಮಧ್ವಾಚಾರ್ಯರ ನಿಜಶಿಷ್ಯಪ್ರವರರಾದ ಶ್ರೀ ಹೃಷಿಕೇಶತೀರ್ಥರ ಪರಂಪರೆಯಲ್ಲಿ ಇಪ್ಪತ್ತೈದನೆಯ ಯತಿವರ್ಯರಾಗಿ ಪೀಠವನ್ನಲಂಕರಿಸಿದ ಶ್ರೀ ರಘುಪ್ರವೀರತೀರ್ಥರ ತಪಸ್ಸಿಗೆ ಒಲಿದ ಘಟಿಕಾಚಲದ ಶ್ರೀಮುಖ್ಯಪ್ರಾಣದೇವರ ಆಡುಂಬೊಲವಾದ, ಮಂಗಳಾಷ್ಟಕಕರ್ತಾರರಾಗಿ ಪ್ರಖ್ಯಾತರಾದ ಶ್ರೀರಾಜರಾಜೇಶ್ವರತೀರ್ಥರು ಹಾಗೂ ಬಹುಗ್ರಂಥಪ್ರಣೇತೃಗಳಾದ ಯತಿತತಿನಿರ್ಮಾತೃಗಳಾದ, ವಿದ್ವದ್ವೃಂದವಿದ್ಯಾದಾತೃಗಳಾದ, ವಿದ್ಯಾಪೀಠ–ಮಧ್ವಮಠವೃಂದಸಂಸ್ಥಾಪಕರಾದ, ದೇಶಾದ್ಯಂತ ವಾಕ್ಯಾರ್ಥನಡೆಸಿ–ಪ್ರತಿವಾದಿಗಳನ್ನು ಜಯಿಸಿ ವಾದಿಭಯಂಕರರೆನಿಸಿದ, ಪರವಿದ್ಯೆಗೆ ಮಾನ್ಯತೆಯನ್ನು ತಂದುಕೊಟ್ಟು ಪರವಿದ್ಯೆಯಿಂದ ಮಾನ್ಯರಾದ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರೇ ಮೊದಲಾದಯತಿವರೇಣ್ಯರ ತಪೋಭೂಮಿಯಾದ, ಶ್ರೀವೇದವ್ಯಾಸದೇವರ ನಿತ್ಯಸನ್ನಿಧಾನವಿರುವ ಪಲಿಮಾರಿನ ಶ್ರೀಮಠದಲ್ಲಿ ಶ್ರೀ ಮಠದ ಯೋಗದೀಪಿಕಾ ಟ್ರಸ್ಟ್‌ನ ಮೂಲಕ ನಡೆಸುವ ಯೋಗದೀಪಿಕಾ ವಿದ್ಯಾಪೀಠದಲ್ಲಿ ವೇದ, ಸಂಸ್ಕೃತ, ಪೌರೋಹಿತ್ಯ, ಆಗಮ ಹಾಗೂ ಜ್ಯೋತಿಷ್ಯಗಳ ಬಗ್ಗೆ ಆರು ವರ್ಷಗಳ ಶಿಕ್ಷಣ ನೀಡುತ್ತಿದ್ದು ಇದಕ್ಕೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ಏಪ್ರಿಲ್ ತಿಂಗಳ ದಿನಾಂಕ 20ರೊಳಗೆ ಈ ಕೆಳಗಿನ ವಿಳಾಸಕ್ಕೆ ಅರ್ಜಿಯನ್ನು ಸಲ್ಲಿಸಬಹುದು.

ಈ ಸಂಸ್ಥೆಯು ಕರ್ನಾಟಕ ಸರಕಾರದ ಹಿಂದೂ ಧಾರ್ಮಿಕದತ್ತಿ ಇಲಾಖೆಯ ಮಾನ್ಯತೆ ಪಡೆದಿದ್ದು ರಾಜ್ಯ ಆಗಮ ಶಿಕ್ಷಣ ಮತ್ತು ಪರೀಕ್ಷಾ ಮಂಡಳಿ ನಡೆಸುವ ಪ್ರವರ ಮತ್ತು ಪ್ರವೀಣ ಪರೀಕ್ಷೆಗಳಲ್ಲಿ ಭಾಗವಹಿಸುವಂತೆ ಶಿಕ್ಷಣ ನೀಡಲಾಗುತ್ತಿದೆ.

ಉಪನೀತರಾದ 10 ವರ್ಷಕ್ಕಿಂತ ಮೇಲ್ಪಟ್ಟು 16 ವರ್ಷದ ಒಳಗಿನ ಬ್ರಾಹ್ಮಣ ವಟುಗಳು ಪ್ರವೇಶಪಡೆಯಲು ಅರ್ಹರಾಗಿದ್ದು (ಅರ್ಜಿಯಲ್ಲಿ) ವಿದ್ಯಾರ್ಥಿಯ ಹೆಸರು, ಪೂರ್ಣವಿಳಾಸ (ದೂರವಾಣಿ ಸಂಖ್ಯೆ ಸಹಿತ) ವಯಸ್ಸು, ಗುರುಮಠ, ಗೋತ್ರ, ವೇದಶಾಖೆ ಈವರೆಗೆ ಆದ ವಿದ್ಯಾಭ್ಯಾಸದ ವಿವರಗಳನ್ನೊಳಗೊಂಡ ಅರ್ಜಿಯನ್ನು ಸಲ್ಲಿಸಬಹುದು.

ಕಾರ್ಯದರ್ಶಿ
ಯೋಗದೀಪಿಕಾ ಟ್ರಸ್ಟ್
ಶ್ರೀಪಲಿಮಾರು ಮಠ,
ರಥಬೀದಿ, ಉಡುಪಿ–576 101.
ದೂ. ಸಂಖ್ಯೆ: 2523402

ಇದು ಬರಿಯ ಮಾತಲ್ಲ, ಅನುಭಾವಿಗಳ ಅನುಭವದ ಮಾತು.

**ವಿದ್ವತ್ ಪ್ರಪಂಚ**



# ಶ್ರೀಮಧ್ವಮತದ ವೈಶಿಷ್ಟ್ಯಗಳು

–ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು

~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

## 4) ಸಾಧನಾಧಿಕ್ಯಕ್ಕೆ ಸಾರ್ಥಕತೆ

ಸಾಧಕರು ನಡೆಸುವ ಸಾಧನಾನುಷ್ಠಾನದಲ್ಲಿ ತಾರತಮ್ಯವು ಕಂಡಿದೆ. ಚತುರ್ಮುಖ ಕಲ್ಪ ಕಲ್ಪದಲ್ಲಿ ನಡೆಸುವ ಸಾಧನದ ಪ್ರಮಾಣಕ್ಕೂ ಸಾಮಾನ್ಯ ಸಾಧಕನೊಬ್ಬ ಕೆಲವು ಜನ್ಮಗಳಲ್ಲಿ ನಡೆಸುವ ಸಾಧನದ ಪ್ರಮಾಣಕ್ಕೂ ಮೇರುಸರ್ಷಪಗಳಲ್ಲಿರುವಷ್ಟು ಅಂತರ, ಹೀಗಿದ್ದರೂ ಎಲ್ಲರೂ ಬ್ರಹ್ಮಭಾವವನ್ನು ಹೊಂದುವುದೇ ಮುಕ್ತಿ ಎಂದು ಪ್ರತಿಪಾದಿಸುವ ಅದ್ವೈತಮತದಲ್ಲಾಗಲೀ, ಮುಕ್ತಾತ್ಮರೆಲ್ಲ ಸಮಾನರೆಂದು ಪ್ರತಿಪಾದಿಸುವ ರಾಮಾನುಜೀಯ ಮತದಲ್ಲಾಗಲೀ ಮುಕ್ತಿರೂಪ ಫಲದಲ್ಲಿ ಯಾವುದೇ ರೀತಿಯ ವೈಷಮ್ಯವಿಲ್ಲ. ಸಾಧಕನ ಸಾಧನದ ಪ್ರಮಾಣ ಎಷ್ಟೇ ಇರಲಿ ಮುಕ್ತಿ ಫಲದಲ್ಲಂತೂ ಏನೂ ತಾರತಮ್ಯವಿಲ್ಲ. ಹೀಗಾದರೆ ಯಾರೂ ಅಧಿಕ ಪ್ರಮಾಣದ ಸಾಧನಾನುಷ್ಠಾನದಲ್ಲಿ ತೊಡಗಲಾರರು. ಚೆನ್ನಾಗಿ ಓದಿದವನಿಗೂ ಸ್ವಲ್ಪ ಓದಿದವನಿಗೂ ಒಂದೇ ರೀತಿಯ ಅಂಕಗಳೆಂದರೆ ವಿದ್ಯಾರ್ಥಿ ಅಧಿಕ ಪರಿಶ್ರಮವನ್ನೇಕೆ ಕೈಗೊಳ್ಳುವನು?

ಹೀಗೆ ಸಾಧನಾದಿಕ್ಯದ ವೈಯರ್ಥ್ಯವು ಮಧ್ವಮತದಲ್ಲಿ ಪರಿಹರಿಸಲಾಗುವುದು. ಸಾಧ್ಯವಾದ ಮುಕ್ತಿಯಲ್ಲೂ ತಾರತಮ್ಯವಿದೆ. ಮುಕ್ತಿಯಲ್ಲಿ ಪ್ರತಿಯೊಬ್ಬರೂ ಪೂರ್ಣರಾಗುವರಾದರೂ ಆಯಾಯ ಪೂರ್ಣತೆಯಲ್ಲೂ ತಾರತಮ್ಯವಿದೆ. ಸಾಧನಾನುಷ್ಠಾನದ ಪರಿಮಾಣಕ್ಕನುಗುಣವಾಗಿ ಮುಕ್ತಿಯಲ್ಲಿಯ ಪೂರ್ಣತೆಯೂ ಬದಲಾಗುವುದು. **'ಸಾಧನಸ್ಯೋತ್ತಮತ್ವೇನ ಸಾಧ್ಯಂ ಚೋತ್ತಮಮಾಪ್ನುಯುಃ'**

ಈ ರೀತಿಯ ಸಮರ್ಥನೆಯಿಂದಾಗಿ ಸಾಧಕರು ಹೆಚ್ಚು ಹೆಚ್ಚು ಸಾಧನಾನುಷ್ಠಾನದಲ್ಲಿ ತೊಡಗುವಂತಾಗಿದೆ.



## 5) ದ್ವೇಷಕ್ಕೆ ಮೋಕ್ಷಸಾಧನತ್ವ ನಿರಾಸ

ಭಾಗವತದಲ್ಲೇ **'ದ್ವೇಷಾಚ್ಚೈದ್ಯಾದಯೋ ನೃಪಾಃ....'** (7–1–31) ದ್ವೇಷವೂ ಮೋಕ್ಷಸಾದನ ಎಂಬಂತೆ ಆಪಾತತಃ ಕಾಣುವುದು. ಆದರೆ ಶ್ರೀಮನ್ಮಧ್ವಾಚಾರ್ಯರು ಇಲ್ಲಿ ದ್ವೇಷವನ್ನು ಮೋಕ್ಷಸಾಧನವನ್ನಾಗಿ ಹೇಳಲಾಗಿಲ್ಲ ಎಂದು ಪ್ರಬಲವಾಗಿ ಸಮರ್ಥಿಸಿರುವರು. ಭಗವಂತನ ಭಕ್ತಾಪರಾಧಸಹನಶೀಲ್ತ್ವವನ್ನು ತೋರಿಸಿ ಕೊಡಲು ಈ ಮಾತು ಹೊರಟಿದೆ ಎಂದು ಅವರ ಅಭಿಪ್ರಾಯ. ಶಿಶುಪಾಲಾದಿಗಳು ಅಸುರಾವೇಶದಿಂದಾಗಿ ಭಗವಂತನನ್ನು ದ್ವೇಷಿಸಿರುವುದೇನೋ ನಿಜ. ಆದರೆ ಆ ದ್ವೇಷ ಔಪಾಧಿಕ. ಅವರಲ್ಲಿ ಸ್ವಾಭಾವಿಕವಾಗಿ ಭಗದ್ಭಕ್ತಿಯೇ ಇದೆ. ಇದನ್ನು ವಿಶ್ಲೇಷಿಸಿಕೊಳ್ಳುವ ಭಗವಂತನು. ಅವರು ಅಸುರಾವೇಶ ಪ್ರಯುಕ್ತವಾಗಿ ಎಸಗುವ ದ್ವೇಷವನ್ನು ಪರಿಗಣಿಸದೆ ಅವರಲ್ಲಿ ಸವಾಭಾವಿಕವಾಗಿರುವ ಭಕ್ತಿಭಾವಕ್ಕೆ ಒಲಿದ ಅವರಿಗೆ ಸದ್ಗತಿಯನ್ನೇ ನೀಡುವನೆಂದು ಆ ಮಾತಿನ ಆಶಯ. ದ್ವೇಷಾತ್ ಅಂದರೆ 'ದ್ವೇಷದಿಂದ' ಎಂದರ್ಥವಲ್ಲ. ದ್ವೇಷವನ್ನು ಲಕ್ಷಿಸದೆ ಎಂದೇ ಅರ್ಥ. **'ದ್ವೇಷಂ ಅಲಕ್ಷೀಕೃತ್ಯ'** ಎಂಬುದಾಗಿ.

ಹೀಗೆ ಭಗವದ್‌ದ್ವೇಷಕ್ಕೆ ಮುಕ್ತಿಸಾಧನತ್ವವನ್ನು ನಿರಾಕರಿಸುವುದರ ಮೂಲಕ ಜನರು ಭಗವದ್‌ದ್ವೇಷವನ್ನು ತಂದುಕೊಳ್ಳದೆ, ಅವನಲ್ಲಿ ಭಕ್ತಿಭಾವವನ್ನೇ ಹೊಂದುವಂತೆ ಮಧ್ವಮತವು ವ್ಯವಸ್ಥಾಪಿಸಿದೆ.

## 6) ದ್ವೇಷದಿಂದ ಅಂಧಂತಮಸ್ಸು

ಭಗವದ್ ದ್ವೇಷದಿಂದ ಮುಕ್ತಿ ಆಗದೆ ಇರುವುದಷ್ಟೇ ಅಲ್ಲ, ನಿತ್ಯನರಕ ಎನಿಸಿರುವ ಅಂಧಂತಮಸ್ಸೂ ದೊರಕುವುದೆಂದು ಮಧ್ವಮತದಲ್ಲಿ ಸಮರ್ಥಿಸಲಾಗಿದೆ.

ಗೀತಾಚಾರ್ಯನು 'ಮಾಮತ್ಮಪರದೇಹೇಷು ಪ್ರದ್ವಿಷಂತೋಭ್ಯಸೂಯಕಾಃ.... ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಮ್' (16–29) ಎಂದು ತತ್ವವನ್ನು ದ್ವೇಷಿಸುವವರು ತನ್ನನ್ನು ಎಂದೆಂದಿಗೂ ಹೊಂದದೆ ಅಧಮಗತಿ ಎನಿಸಿರುವ ಅಂಧಂತಮಸ್ಸಿಗೆ ಹೋಗುವರೆಂದು ಸಂದೇಶಿಸಿರುವನು. ಈ ಸಂದೇಶವನ್ನು ಸ್ಪಷ್ಟವಾಗಿ ಪ್ರಕಟಪಡಿಸಿದ್ದು ಮಧ್ವಮತದಲ್ಲಿ. ಕರ್ಮವು ಅನಿತ್ಯಫಲವುಳ್ಳದಾಗಿರುವುದರಿಂದ ನಿತ್ಯಫಲವುಳ್ಳ ಜ್ಞಾನವು ಕರ್ಮಕ್ಕಿಂತ ಶ್ರೇಷ್ಠ ಎನ್ನುವಂತೆ. ನರಕಾದಿ ಅನಿತ್ಯ ದುಷ್ಫಲವುಳ್ಳ ಕೆಟ್ಟ ಕರ್ಮಕ್ಕಿಂತ ಕೆಟ್ಟ ಜ್ಞಾನ ಅಂದರೆ ಅನ್ಯಥಾ ಜ್ಞಾನ ಅತಿಹೇಯ ಎಂದೆನಿಸಬೇಕಾದರೆ
~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

ಅದಕ್ಕೆ ನಿತ್ಯವಾದ ದುಷ್ಫಲವನ್ನು ಹೇಳಬೇಕು ತಾನೆ? ಅದೇ ನಿತ್ಯ ನರಕ ಎಂದೆನಿಸದೆ ಎಂಬುದಾಗಿ ಶ್ರೀ ವಾದಿರಾಜಸ್ವಾಮಿಗಳು ತಮ್ಮ 'ದಶೋಪನ್ಯಾಸ' ಎಂಬ ಕೃತಿಯಲ್ಲಿ ನಿತ್ಯ ನರಕ ಯುಕ್ತಿಯಿಂದಲೂ ಸಿದ್ಧವಾಗಿದೆ ಎಂದು ಸಮರ್ಥಿಸಿರುವರು. ಹೀಗೆ ಮಧ್ವಮತದಲ್ಲಿ ಭಗವದ್ ದ್ವೇಷಕ್ಕೆ ನಿತ್ಯನರಕ ರೂಪವಾದ ಘೋರ ಶಿಕ್ಷೆಯನ್ನು ಸಮರ್ಥಿಸಿ ಸಾಧಕನು ಆ ಶಿಕ್ಷೆಗೆ ಭಯಪಟ್ಟು ಭಗವದ್ ದ್ವೇಷದಿಂದ ದೂರವಿರುವಂತೆ ಮಾಡಲಾಗಿದೆ.

ನಿತ್ಯನರಕವನ್ನು ಒಪ್ಪಿದಲ್ಲಿ, ಅಂತಹ ನಿತ್ಯ ನರಕವನ್ನು ಅನುಭವಿಸುತ್ತಿರುವವರ ಕುರಿತು ಭಗವಂತನಿಗೆ ಕರುಣೆಯೇ ಬಾರದೆಂದು 'ನೈರ್ಘಣ್ಯ' ದೋಷವನ್ನು ಹೇಳಿದಂತಾಗದೆ? ಇಲ್ಲ. ಭಗವಂತನು ಸಜ್ಜನರ ಅಪರಾಧಗಳನ್ನೆಲ್ಲ ಸಹಿಸಿ ಅವರನ್ನು ಉದ್ಧರಿಸುವನೆಂಬುದರಿಂದ ಅವನು ದಯೆ ಉಳ್ಳವನೆಂದು ಸಿದ್ಧವಾಗುವುದು. ಧನಿಕನೊಬ್ಬನು ಕೆಲವರಿಗೆ ದಾನ ಮಾಡದಿದರೂ, ಮತ್ತೆ ಕೆಲವರಿಗೆ ದಾನ ಮಾಡುವನೆಂದರೆ ಅವನು ಉದಾರಿ ಎಂದು ಸಿದ್ಧಿಸದಿರದು ತಾನೆ? ಅವನು ನಿತ್ಯನರಕಿಗಳ ಮೇಲೂ ಯಾಕೆ ದಯೆ ತೋರುವುದಿಲ್ಲ? ಇಂತಹ ಆಪತ್ತಿ ನಿತ್ಯನರಕವನ್ನು ಒಪ್ಪದವರ ಮೇಲೂ ಇದ್ದೇ ಇದೆ. ಸಂಸಾರದಲ್ಲಿ ಭಗವಂತನು ಕೆಲವರಿಂದ ಪಾಪಕರ್ಮಗಳನ್ನು ಮಾಡಿಸಿ, ಅದಕ್ಕನುಗುಣವಾಗಿ ಯಾಕೆ ದುಃಖವನ್ನು ಕೊಡುವನು? ಅವರ ಮೇಲೆ ದಯೆ ತೋರಿ ಅವರಿಂದಲೂ ಪುಣ್ಯ ಕರ್ಮವನ್ನೇ ಮಾಡಿಸಿ ಯಾಕೆ ಸುಖವನ್ನು ನೀಡಲಾರ? ತಂದೆ ತನ್ನ ಪುತ್ರನಿಗೆ ಹೊಡೆದು ಬಡೆದು ಶಿಕ್ಷೆಯನ್ನಿತ್ತು ಸನ್ಮಾರ್ಗಕ್ಕೆ ತರುವಂತೆ ಭಗವಂತನೂ ದುಃಖವನ್ನು ನೀಡಿ ಮುಂದೆ ಸುಖವನ್ನು ನೀಡುವನೆಂಬ ಸಮಾಧಾನ ಸಮಂಜಸವೆನಿಸದು. ತಂದೆಯಾದವನಿಗೆ ಪುತ್ರನನ್ನು ಸನ್ಮಾರ್ಗಕ್ಕೆ ತರಬೇಕಾದರೆ ಅದೇ ವಿಧಾನ. ಭಗವಂತನಿಗಾದರೂ ಬುದ್ಧಿಯನ್ನು ಪ್ರೇರಿಸುವುದರ ಮೂಲಕವೇ ಸನ್ಮಾರ್ಗದಲ್ಲಿ ತೊಡಗಿಸಬಹುದು ತಾನೇ? ಹೀಗಿರುವಾಗ ಮೊದಲು ಕಷ್ಟಗಳನ್ನು ಕೊಟ್ಟು ಬಳಿಕ ಅವನನ್ನು ತಿದ್ದಬೇಕಿಲ್ಲ. ಆದರೂ ಭಗವಂತ ಸಂಸಾರದಲ್ಲಿ ಕೆಲವರಿಗೆ ಅವರ ಪಾಪಕ್ಕನುಗುಣವಾಗಿ ದುಃಖವನ್ನು ಹೇಗೆ ನೀಡುವನೋ ಹಾಗೆಯೇ ನಿತ್ಯನರಕಿಗಳಿಗೂ ನಿತ್ಯವಾಗಿ ದುಃಖವನ್ನು ನೀಡುವನು.

(ಮುಂದುವರಿಯುವುದು)

**ಅವನಿಗೆ ಅರ್ಪಿಸಿದ ಪವಿತ್ರಾನ್ನವನ್ನು ಸ್ವೀಕರಿಸಬೇಕು.**





# ವಿದುರ ನೀತಿ

–ಶ್ರೀ ವಿಶ್ವಪ್ರಿಯತೀರ್ಥ ಶ್ರೀಪಾದರು ಶ್ರೀಅದಮಾರುಮಠ

~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

ಮಹಾಭಾರತದ ಉದ್ಯೋಗಪರ್ವದಲ್ಲಿ ಬರುವ ಒಂದು ಪ್ರಮುಖವಾದ ಘಟ್ಟ ವಿದುರನೀತಿ. ಸಮಾಜದಲ್ಲಿ ಎರಡು ನೀತಿಗಳನ್ನು ನಾವು ನೋಡಬಹುದು. ಒಂದು ವಿದುರ ನೀತಿ. ಮತ್ತೊಂದು ಕಣಿಂಕ ನೀತಿ. ಬೇಕು ಎಂದು ಅಪೇಕ್ಷೆ ಪಟ್ಟರೂ, ಜೀವನದಲ್ಲಿ ಒಗ್ಗಿಸಿಕೊಳ್ಳಲು ಯಾವುದು ಕಷ್ಟವೋ ಅದನ್ನು ವಿದುರ ನೀತಿ ಎಂದು ಕರೆದರು. ಯಾವುದು ಬೇಡವಾದುದ್ದೋ, ನಮ್ಮ ಜೀವನದಲ್ಲಿ ನಿರಾಯಾಸವಾಗಿ ಇದೆಯೋ ಅದನ್ನು ಕಣಿಂಕ ನೀತಿ ಎಂದು ಕರೆದರು. ಕಣಿಂಕ ನೀತಿ ಬಹಳ ಸುಲಭ. ಎಲ್ಲರ ಜೀವನದಲ್ಲಿಯೂ ಸೇರಿಕೊಂಡಿದೆ. ದುರ್ಯೋಧನನ ಮೂಲಕ ಕಣಿಂಕ ಕೊಟ್ಟ ಉಪದೇಶ ಕಣಿಂಕನೀತಿ ಎಂದಾಯಿತು. ದೇವರಿಗೂ ಸಮಾಜಕ್ಕೂ ಮೋಸ ಮಾಡುವುದೇ ಕಣಿಂಕನೀತಿಯ ಸಾರ. ಅಣ್ಣ ದೃತರಾಷ್ಟ್ರನಿಗೆ ತಮ್ಮ ವಿದುರನು ಹೇಳಿದ ಉಪದೇಶ ವಿದುರನೀತಿ. ಸಮಾಜದ ಕಾಯಿಲೆಯನ್ನು ಪತ್ತೆಹಚ್ಚಿ ಅದಕ್ಕೆ ಸೂಕ್ತವಾದ ಔಷದಿಯನ್ನು ಕೊಡುವುದೇ ಈ ವಿದುರನೀತಿಯ ಸಾರ.

ಇದರ ಹಿನ್ನಲೆ ಇಂತಿದೆ–ಪಾಂಡವರ ಅಜ್ಞಾತವಾಸ ಮುಗಿದಿದೆ. ವಿರಾಟನ ಮನೆಯಲ್ಲಿ ಕೃಷ್ಣ ಹಾಗೂ ಪಾಂಡವರು ಸೇರಿ ಮುಂದೇನು? ಎಂದು ಜಿಜ್ಞಾಸೆ ನಡೆಸುತ್ತಿದ್ದಾರೆ. ದುರ್ಯೋಧನ ರಾಜ್ಯ ಕೊಡುತ್ತಾನೋ? ಇಲ್ಲವೋ? ಇಲ್ಲವಾದಲ್ಲಿ ತೆಗೆದುಕೊಳ್ಳುವುದೋ? ಅಥವಾ ಸುಮ್ಮನಿರುವುದೋ? ಎಂಬ ಚರ್ಚೆ ನಡೆಯುತ್ತಿದೆ. ಈ ಸಂದರ್ಭದಲ್ಲಿ ಶ್ರೀಕೃಷ್ಣನು "ದುರ್ಯೋಧನನ ಬಳಿಗೆ ಒಬ್ಬ ವ್ಯಕ್ತಿಯನ್ನು ಕಳಿಸಿ ಅವನ ಅಭಿಪ್ರಾಯವನ್ನು ತಿಳಿದುಕೊಂಡು ಬರಲಿ. ದುರ್ಯೋಧನ ರಾಜ್ಯವನ್ನು ಕೊಡುವುದಿಲ್ಲವೆಂದಾದಲ್ಲಿ ನಂತರದ ಸಿದ್ಧತೆಯನ್ನು ಮಾಡೋಣ" ಎಂದು ಹೇಳುತ್ತಾನೆ. ಕೃಷ್ಣನ ಮಾತಿಗೆ ಅನುಸಾರವಾಗಿ ಪಾಂಡವರು ಒಬ್ಬ ಪುರೋಹಿತನನ್ನು ದೃತರಾಷ್ಟ್ರನ ಬಳಿಗೆ ಕಳುಹಿಸಿದರು. ದೃತರಾಷ್ಟ್ರನ ಸಭೆಗೆ ರಾಯಭಾರಿಯಾಗಿ ಬಂದ ಆ ಪುರೋಹಿತನು ಸಭೆಯಲ್ಲಿ ಪಾಂಡವರ ಅಭಿಪ್ರಾಯವನ್ನು ತಿಳಿಸುತ್ತಿರಲು, ಆಮಾತನ್ನು ಕೇಳಿ ತಕ್ಷಣ ಭೀಷ್ಮನು ಪಾಂಡವರನ್ನು ಬಾಯಿ ತುಂಬಾ ಹೊಗಳತೊಡಗಿದನು. ಆ ಸಭೆಯಲ್ಲೇ

**ಶ್ರೀ ಕೃಷ್ಣನ ಮೂರ್ತಿಯನ್ನು ಸಂದರ್ಶಿಸಬೇಕು.**
~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

ಇದ್ದ ಕರ್ಣನು ತಕ್ಷಣ ಎದ್ದು ನಿಂತು ಎಂಥಾ ಸಂದರ್ಭದಲ್ಲಿ ಕೌರವರನ್ನು ಹೊಗಳದ ಭೀಷ್ಮ ಪಾಂಡವರನ್ನು ಹೊಗಳಲು ತಡಮಾಡುವುದಿಲ್ಲ ಎಂದು ಭೀಷ್ಮರನ್ನು ತರಾಟೆಗೆ ತೆಗೆದುಕೊಂಡನು. ಆ ಮಾತಿಗೆ ಭೀಷ್ಮರು ಕರ್ಣನನ್ನು ಜರಿದರು. ಭೀಷ್ಮರಿಗೂ ಕರ್ಣನಿಗೂ ಸಣ್ಣ ವಾಗ್ಯುದ್ದವೇ ನಡೆಯಿತು. ಧೃತರಾಷ್ಟ್ರನು ಕಣ್ಣಿಲ್ಲದೆಯೇ ಇದನ್ನು ಕೇಳಿಸಿಕೊಂಡರೆ ದುರ್ಯೋಧನನೂ ಕಣ್ಣಿದ್ದೂ ಕುರುಡಾಗಿ ಕೇಳಿಸಿಕೊಂಡನು. ಒಬ್ಬ ಪುರೋಹಿತ ಬಂದದ್ದಕ್ಕೆ ತನ್ನ ಪಾಳಯ ಅಲ್ಲೋಲಕಲ್ಲೋಲವಾದ್ದದ್ದನ್ನು ಕಂಡ ಧೃತರಾಷ್ಟ್ರ, ಇನ್ನು ಸ್ವಯಂ ಪಾಂಡವರೇ ಬಂದರೆ ತನ್ನ ಪಾಳೆಯದ ಗತಿಯೇನು? ಎಂದು ಚಿಂತಿಸಿದನು. ರಾಜ್ಯವನ್ನು ಪಾಂಡವರಿಗೆ ಕೊಡುವುದೋ ಬೇಡವೋ ಎಂದು ವಿಚಾರಿಸಿ ಆಲೋಚಿಸಿ ನಂತರ ಹೇಳಿಕಳುಹಿಸುತ್ತೇನೆ ಎಂದು ರಾಯಭಾರಿಯಾಗಿ ಬಂದ ಪುರೋಹಿತನನ್ನು ಕಳುಹಿಸಿಕೊಟ್ಟನು. ರಾಯಭಾರಿಯಾದ ಪುರೋಹಿತ ಬಂದು ಹೋದ ಮೇಲೆ ಪಾಂಡವರಿಗೆ ರಾಜ್ಯ ಕೊಡುವ ವಿಚಾರದಲ್ಲಿ ಧೃತರಾಷ್ಟ್ರ ಅಲೋಚನೆ ಮಾಡಲು ತೊಡಗಿದ. ಯದ್ಯಪಿ ಹನ್ನೆರಡು ವರ್ಷ ವನವಾಸ ಒಂದು ವರ್ಷದ ಅಜ್ಞಾತವಾಸ ಕಳೆದ ಕ್ಷಣದಿಂದ ಅಥವಾ ಪಾಂಡವರನ್ನು ಕಾಡಿಗೆ ಕಳುಹಿಸಿದ ತಕ್ಷಣ ಧೃತರಾಷ್ಟ್ರ ಈ ಆಲೋಚನೆಯನ್ನು ಮಾಡಬೇಕಿತ್ತು.

ತನ್ನ ಅಭಿಪ್ರಾಯವನ್ನು ಪಾಂಡವರಿಗೆ ತಿಳಿಸುವುದಕೋಸ್ಕರ ಸಂಜಯನನ್ನು ಕಳುಹಿಸಿಕೊಟ್ಟನು. ಧರ್ಮಜನೆಡೆಗೆ ಬಂದ ಸಂಜಯ ಧರ್ಮರಾಜನನ್ನು ಕುರಿತು "ನಿನಗೆ ರಾಜ್ಯದ ಬಯಕೆ ಬೇಡ. ಹಿಂದಿನವರು ಬಹಳಷ್ಟು ಮಂದಿ ರಾಜ್ಯ-ಸಿಂಹಾಸನ ಎಂದು ಹೊಡೆದಾಡಿ ಹೋರಾಡಿದ್ದಾರೆ. ಆದರೆ ಯಾರೂ ಹೋಗುವಾಗ ರಾಜ್ಯವನ್ನಾಗಲಿ-ಕೋಶವನ್ನಾಗಲೀ ಹಿಡಿದುಕೊಂಡು ಹೋಗಲಿಲ್ಲ. ಆ ಪಕ್ಷದಲ್ಲಿರುವ ಭೀಷ್ಮ-ದ್ರೋಣ-ಕೃಪ-ಅಶ್ವತ್ಥಾಮನೊಡನೆ ಹೋರಾಡಲು ಸಾಧ್ಯವಿಲ್ಲ. ಆದ್ದರಿಂದ ರಾಜ್ಯದ ಆಸೆಯನ್ನು ಬಿಟ್ಟುಬಿಡು ಎಂದನು. ಈ ಮಾತಿಗೆ ಪ್ರತಿಯಾಗಿ ಧರ್ಮರಾಜನು ರಾಜ್ಯ ಬೇಡವಾದರೂ ಜೀವನಕ್ಕೇನಾದರೂ ಉಪಾಯವನ್ನು ಹೇಳು ಭಿಕ್ಷೆ ಬೇಡಿದರೇ ದುರ್ಯೋಧನನ ರಾಜ್ಯದಲ್ಲಿ ನೋಡಿ ಭಿಕ್ಷೆ ಸಿಗಬಹುದೇ ಎಂದು ಸಂಜಯನನ್ನು ವಿಚಾರಿಸಿದನು. ಈ ಮಾತನ್ನು ಕೇಳಿದ ಕೃಷ್ಣನು ಧರ್ಮರಾಜನನ್ನು ಕುರಿತು ತನಗೆ ರಾಜ್ಯ ಬೇಡ ಕೋಶ ಬೇಡ ಎಂದು ಹೇಳತೊಡಗಿದರೆ ಲೋಕದಲ್ಲಿ ಸ್ವರ್ಗದಿಂದ ಇಳಿದಿರುವ ಶಸ್ತ್ರ ಎಂಬುದಕ್ಕೆ ಕೃತ್ಯ ಇಲ್ಲ ಎಂದಾಯಿತು. ಇಲ್ಲಿ "ಶಸ್ತ್ರ" ಎಂದರೆ ಯಾರೂ ಕೊಟ್ಟಮಾತನ್ನು ತಪ್ಪುವರೋ ಅವರನ್ನು ಶಾಸನ ಮಾಡಲು

ಪ್ರತಿದಿನ ಆತನನ್ನು ಪೂಜಿಸಬೇಕು



ಹೊರಟಿರತಕ್ಕಂತಹ ಆಯುಧ. "ಶಾಸ್ತಿ ಇತಿ ಶಸ್ತ್ರಂ" ಎದುರು ಮಾತಿನ ಮೂಲಕ ಶಾಸನಮಾಡುವುದಕ್ಕೆ ಶಾಸ್ತ್ರವೆಂದು ಹೆಸರು. ಬಡಿಯುವ ಮೂಲಕ ಶಾಸನಮಾಡುವುದಕ್ಕೆ ಶಸ್ತ್ರವೆಂದು ಹೆಸರು.

ಧೃತರಾಷ್ಟ್ರನಿಗೋಸ್ಕರ ಕೃಷ್ಣನಿಂದ ಬೈಗುಳ ತಿಂದ ಸಂಜಯನು ಧೃತರಾಷ್ಟ್ರನಲ್ಲಿಗೆ ಬಂದನು. ಮೊದಲೇ ಅಸಮಾಧಾನಗೊಂಡ ಸಂಜಯನು ಪಾಂಡವರ ಸಭೆಯಲ್ಲಿ ನಡೆದ ವಿಷಯವನ್ನು ತಿಳಿಸಲು ನಿರಾಕರಿಸಿ ಆ ವಿಷಯವನ್ನು ಮಾರನೆಯ ದಿನ ದುರ್ಯೋಧನ, ದುಶ್ಯಾಸನ, ಶಕುನಿ, ಕರ್ಣ ಎಲ್ಲರು ಇರುವ ತುಂಬು ಸಭೆಯಲ್ಲಿ ತಿಳಿಸುವುದಾಗಿ ಹೇಳಿದ. ಈ ವಿಷಯದಿಂದಾಗಿ ಧೃತರಾಷ್ಟ್ರನಿಗೆ ರಾತ್ರಿಯೆಲ್ಲಾ ನಿದ್ಧೆ ಬೀಳುವುದಿಲ್ಲ. ಸಮಯವಿದ್ದು ಚಾಪೆಯಿದ್ದು ನಿದ್ದೆ ಬರುವುದಿಲ್ಲವೆಂದರೆ ಯಾವುದೋ ಜನ್ಮಾಂತರದ ಪಾಪ ಭಾರಿ ಪ್ರತಿಬಂಧಕವಾಗಿದೆ ಎಂದು ತಿಳಿಯಲ್ಪಡುತ್ತದೆ. ನಿದ್ದೆ ಬಾರದ ರಾತ್ರಿಯನ್ನು ಕಳೆಯಲು ಧೃತರಾಷ್ಟ್ರನು ವಿಧುರನನ್ನು ಬರಹೇಳಿದ.

ಧೃತರಾಷ್ಟ್ರನ ಕೋಣೆಯ ಬಳಿಗೆ ಬಂದು ಬಾಗಿಲು ಕಾಯುವವನ ಅನುಮತಿಯನ್ನು ಪಡೆದುಕೊಂಡು ವಿದುರ ಕೊಠಡಿಯನ್ನು ಪ್ರವೇಶಿಸಿದ. ಇಷ್ಟು ವರ್ಷಗಳಿಂದ ಕರೆಯದೇ, ಈಗ ಕರೆಯಬೇಕಾದರೆ ಏನೋ ಗಂಡಾಂತರ ಕಾದಿದೆ ಎಂದು ಊಹಿಸಿದ. ವಿದುರನು ಯಮನಲ್ಲದೇ ಬೇರೆ ಯಾರೂ ಆಲ್ಲ. ಯಮನನ್ನು ಯಾರೂ ಅಹ್ವಾನಿಸುವುದಿಲ್ಲ. ಯಮನನ್ನು ತನ್ನ ಮನೆಗೆ ಬಾ ಎಂದು ಕರೆದರೆ ಏನೋ ಗಂಡಾಂತರ ಒದಗಿದೆ ಎಂದು ಅರ್ಥ. ಧೃತರಾಷ್ಟ್ರ ತನಗೆ ನಿದ್ದೆ ಬರುವುದಿಲ್ಲ ಎಂದಾಗ-ಅದು ಒಬ್ಬನ ಸ್ವಯಂ ಕರ್ಮ. ನೀನು ಹೇಳಿದ ಕೆಲಸವನ್ನು ಮಾಡಬಹುದು. ಆದರೆ ನಿನ್ನ ತಿಂಡಿ, ತೀರ್ಥ, ಜಪ, ಪೂಜೆ ಮಾಡಿಕೊಡಲು ಬರುವುದಿಲ್ಲ. ಅದನ್ನು ನೀನೇ ಮಾಡತ್ತಕ್ಕದ್ದು. ಅದೇರೀತಿ ನಿದ್ದೆಯೂ ಕೂಡ. ಎಂದು ವಿದುರನು ಹೇಳಿದನು. ಅದನ್ನು ಕೇಳಿದ ಧೃತರಾಷ್ಟ್ರ ನಾಲ್ಕು ವೇದಾಂತದ ಮಾತುಗಳನ್ನು ಆಡಲು ಹೇಳಿದ. ವೇದಾಂತದ ಪ್ರವಚನ ಕೇಳಿದಾಗ ನಿದ್ದೆ ಬರಲು ಧೃತರಾಷ್ಟ್ರ ನಮ್ಮ ನಿಮ್ಮಂತಲ್ಲ. ಅವನೊಬ್ಬ ಸಜ್ಜೀವಿ. ಇದರ ಒಳಾರ್ಥವೇನೆಂದರೆ, ಸಜ್ಜೀವಿಯಾದ ಧೃತರಾಷ್ಟ್ರನಿಗೆ ವೇದಾಂತದ ಮಾತು ಕೇಳಿದಾಗ ನಿದ್ದೆ ಬರುತ್ತದೆ ಎಂದರೆ, ಇಲ್ಲಿ ನಿದ್ರೆ ಎಂದರೆ ದೇಹಾಭಿಮಾನವನ್ನು ಬಿಟ್ಟಿರುವ ಸ್ಥಿತಿ. ವೇದಾಂತದ ಮಾತನ್ನು ಕೇಳಿದರೆ ಮನುಷ್ಯನ ಜೀವನದಲ್ಲಿ ದೇಹದ ಮೇಲಿನ ಅಭಿಮಾನ ಹೋಗುವುದು ಎಂದು ಅರ್ಥ. ಆದರೆ ಧೃತರಾಷ್ಟ್ರ

ಕೃಷ್ಣನ ಪಾದದ ತುಳಸಿಯನ್ನು ಆಘ್ರಾಣಿಸಬೇಕು.

ಈ ಮಾತನ್ನು ಕೇಳಿದ್ದು ಅವನ ಜೀವನದ ಉತ್ತರಾರ್ದದಲ್ಲಿ. ಒಬ್ಬ ವ್ಯಕ್ತಿ ಜೀವನದಲ್ಲಿ ವೇದಾಂತ ಕೇಳಲು ಅಪೇಕ್ಷಿಪಟ್ಟರೆ ಅಂತಹ ವ್ಯಕ್ತಿಯ ಬಳಿಗೆ ಯಮನು ಬರುವಾಗ ಕೇಳಿಕೊಂಡು ಬರುತ್ತಾನೆಯೇ ಹೊರತು ನೇರವಾಗಿ ಬರುವುದಿಲ್ಲ. ವಿದುರ ದ್ವಾರಪಾಲಕನನ್ನು ಕೇಳಿಕೊಂಡು ಒಳಗೆ ನಡೆದ ಎಂದು ಹೇಳುವುದರೊಂದಿಗೆ ವೇದವ್ಯಾಸದೇವರು ಮೇಲಿನ ವಾಕ್ಯವನ್ನು ಚೆನ್ನಾಗಿ ಜೋಡಿಸಿದ್ದಾರೆ.

ಧೃತರಾಷ್ಟ್ರನಿಗೆ ವಿದುರನು ಹೇಳಿದ ಈ ಮಾತುಗಳೇ ವಿದುರನೀತಿ ಎಂದು ಪ್ರಸಿದ್ದವಾಯಿತು. (ಸಶೇಷ)


**ಪರಮಪೂಜ್ಯ ಶ್ರೀಪಲಿಮಾರು ಮಠದ**

**ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರ ದಿವ್ಯೋಪಸ್ಥಿತಿಯಲ್ಲಿ**

**ಪೂರ್ವ–ಪಶ್ಚಿಮ–ಉತ್ತರ ಭಾರತ ತೀರ್ಥಕ್ಷೇತ್ರ ಪ್ರವಾಸ**

**ಜೂನ್ 9ರಿಂದ ಜುಲೈ 9 2008ರತನಕ (30 ದಿನಗಳು)**

ಸೀಟು 1ಕ್ಕೆ ಏರ್–ಹೈಟೆಕ್ ಲಕ್ಸುರೀ ಬಸ್ಸಿನಲ್ಲಿ ರೂ. 18,000/–

ಇಂದೇ ಅಡ್ವಾನ್ಸ್ 5 ಸಾವಿರ ಕೊಟ್ಟು ತಮ್ಮ ಸೀಟುಗಳನ್ನು ಕಾದಿರಿಸಿರಿ

(ಊಟ, ವಸತಿ ಎಲ್ಲಾ ಸೇರಿ)

ಪ್ರತಿನಿತ್ಯ ಆಯಾಯ ಕ್ಷೇತ್ರದ ಮಹಾತ್ಮೆಯನ್ನು ಶ್ರೀಗಳು ಪ್ರವಚನ ಮಾಡುತ್ತಾರೆ.

**ಸಂದರ್ಶಿಸುವ ಸ್ಥಳಗಳು:** ಸೋದೆ, ಕೊಲ್ಲಾಪುರ, ಪಂಢರಾಪುರ, ನಾಸಿಕ, ನರ್ಮದಾ, ಪ್ರಭಾಸ, ಸೋಮನಾಥ, ದ್ವಾರಕಾ, ಭೇಟ್‌ದ್ವಾರಕಾ, ಮಾತೃಗಯಾ, ಪುಷ್ಕರ, ವೃಂದಾವನ, ದೆಹಲಿ, ಕುರುಕ್ಷೇತ್ರ, ಹರಿದ್ವಾರಾ, ಋಷಿಕೇಶ, ಬದರಿನಾಥ, ನೈಮಿಷಾರಣ್ಯ, ಅಯೋಧ್ಯಾ, ಪ್ರಯಾಗ, ಕಾಶಿ, ಗಯಾ, ಪುರೀ, ಕೊನಾರ್ಕ್, ಭುವನೇಶ್ವರ, ಸಿಂಹಾಚಲ, ವಿಜಯವಾಡ, ಮಂಗಳಗಿರಿ, ತಿರುಪತಿ ಇನ್ನು ಹಲವು ಕ್ಷೇತ್ರಗಳು.

ಹೆಚ್ಚಿನ ವಿವರಗಳಿಗೆ–

**ಎ.ಆರ್. ತಂತ್ರಿ, ಬೆಂಗಳೂರು**
**ಮೊಬೈಲ್: 9448073119**
**ರಂಗನಾಥ್ ದಿಗ್ಗಾವಿ, ಬೆಳಗಾಂ**
**ಮೊಬೈಲ್ : 9448506017**

**ಬಿ. ಮಧುಸೂದನ ಆಚಾರ್ಯ**
**ಪಲಿಮಾರು ಮಠ, ಉಡುಪಿ–576 101**
**ಫೋನ್: 2534960 (0)2542425(R)**
**ಮೊಬೈಲ್ : 9448607425**


**ದೇಶ ಸೇವೆಯನ್ನು ದೇವರ ಸೇವೆಯೆಂಬ ಭಾವನೆಯಿಂದ ಮಾಡುತ್ತಿರಿ.**



ಸಾಧನೆಗೊಂದು ಮೆರುಗು

# ಸೂತ್ರ ಕುಸುಮಾಂಜಲಿಯ ಸಮರ್ಪಣಾ ವೈಖರಿ


–ಸಗ್ರಿ ರಾಘವೇಂದ್ರ ಉಪಾಧ್ಯಾಯ


~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

**'ಭಾವಾಷ್ಟಪುಷ್ಪವಿಧಿನಾ ಹರಿಮರ್ಚಯಾಮಿ'** (ಯೋಗದೀಪಿಕಾ 3–71) ಎಂದಿರುವಂತೆ ಭಗವಂತನನ್ನು ಹೊರಗಿನ ಪುಷ್ಪಗಳಿಂದ ಪೂಜಿಸುವಾಗ ಹೃದಯ ಮಂಟಪದಲ್ಲಿರುವ ದೇವರನ್ನು **'ಅಹಿಂಸಾ ಪ್ರಥಮಂ ಪುಷ್ಪಂ....'** ಇತ್ಯಾದಿಯಾಗಿ ತಿಳಿಸಿರುವಂತೆ (ಯೋಗದೀಪಿಕಾ 3–73) ಅಹಿಂಸಾದಿ ಭಾವಪುಷ್ಪಗಳಿಂದ ಪೂಜಿಸಬೇಕು.

ಇಂತಹ ಅಷ್ಟಭಾವಪುಷ್ಪಗಳಲ್ಲಿ ಒಂದು **'ಜ್ಞಾನಪುಷ್ಪಂ ತಪಃ ಪುಷ್ಪಂ.....'** ಎಂದಿರುವಂತೆ ಜ್ಞಾನಪುಷ್ಪ . **'....ಏಭಿಸ್ತುಷ್ಯತಿ ಕೇಶವಃ'** ಎಂದಿರುವಂತೆ ಭಾವಪುಷ್ಪಗಳೇ ಭಗವಂತನಿಗೆ ತುಂಬ ತೃಪ್ತಿಪ್ರದವಾದವು. ಇವುಗಳಲ್ಲೂ ಜ್ಞಾನಪುಷ್ಪ ಭಗವಂತನಿಗೆ ತುಂಬ ತುಂಬ ಸಂತೋಷಪ್ರದವಾದುವು. **'ಜ್ಞಾನೀ ಪ್ರಿಯತಮೋಽತೋ ಮೇ....'** ಎಂದು ಉದ್ಧವಗೀತೆಯಲ್ಲಿ ಶ್ರೀಕೃಷ್ಣ ತನಗೆ ಜ್ಞಾನಿ ಅತ್ಯಂತಪ್ರಿಯ ಎಂದು ಘೋಷಿಸಿರುವುದು ಅವನಲ್ಲಿರುವ ಜ್ಞಾನಸಂಪತ್ತಿನ ಪ್ರೀತಿಯಿಂದಲೇ. ಹೀಗೆ ಭಗವಂತನ ಅತ್ಯಂತ ಪ್ರೀತಿಗೆ ಪಾತ್ರವಾದ ಜ್ಞಾನಪುಷ್ಪವನ್ನು ಪೂಜೆಯ ಅಂಗವಾಗಿ ಸಮರ್ಪಿಸಲೇ ಬೇಕು.

## ಜ್ಞಾನಪುಷ್ಪಾರ್ಪಣೆಯ ವಿಧಾನ

ಅಮೂರ್ತವಾದ ಜ್ಞಾನವನ್ನು ಅರ್ಪಿಸುವುದಾದರೂ ಹೇಗೆ? ಜ್ಞಾನ ಕುಸುಮ ಅಮೂರ್ತವಾದರೂ ಅದನ್ನು ಅನುಸಂಧಾನಿಕವಾಗಿ ಸಮರ್ಪಿಸಬಹುದಾಗಿದೆ. ಯಾವುದಾದರೊಂದು ಜ್ಞಾನವನ್ನು ಸಂಪಾದಿಸಿ ಆ ಜ್ಞಾನವನ್ನು ಚಿಮ್ಮಿಸಿದವನು ಭಗವಂತನೆಂದು ವಿಶ್ಲೇಷಿಸಿಕೊಂಡು ಆ ಜ್ಞಾನಕ್ಕೂ ಭಗವಂತನಿಗೂ ನಂಟು ಹಚ್ಚಬೇಕು. ಇಷ್ಟರಿಂದಲೇ ಆ ಜ್ಞಾನ ಭಗವಂತನಿಗೆ ಸಮರ್ಪಿತವಾದಂತಾಗುವುದು.

**ವೇದ–ಇತಿಹಾಸ–ಪುರಾಣಗಳ ಅಭಿಪ್ರಾಯಕ್ಕೆ ವಿರುದ್ಧವಾದ ದುಷ್ಟವಾದಗಳನ್ನು ಖಂಡಿಸಿರಿ.**
~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

## ಸೂತ್ರಸುಮಗಳ ವೈಭವ

**'ಸರ್ವತ್ರ ವಿಶೋರುತ್ಕರ್ಷಜ್ಞಾನಂ ಜ್ಞಾನಮಿತೀರ್ಯತೇ'** (ಗೀ.ತಾ.6–8) ಎಂದಿರುವಂತೆ ಶ್ರೀವಿಷ್ಣುವಿನ ಸರ್ವೋತ್ತಮತ್ವದ ಜ್ಞಾನವೇ ಜ್ಞಾನ ಎನಿಸುವುದಾದರೂ ಬ್ರಹ್ಮಸೂತ್ರಗಳ ಆಧಾರದಲ್ಲಿ ಉಂಟಾಗುವ ಅಂತಹ ಜ್ಞಾನ ತುಂಬ ವಿಶಿಷ್ಟವಾದುದು. ಯಾಕೆಂದರೆ **'......ಚಕ್ರೇ ಶಾಸ್ತ್ರಮನುತ್ತಮಮ್'** ಎಂದಿರುವಂತೆ ನಿರ್ಣಾಯಕ ಶಾಸ್ತ್ರಗಳಲ್ಲೆಲ್ಲ ಸರ್ವೋತ್ತಮವಾಗಿ ರಚಿತವಾದುದು ಬ್ರಹ್ಮಸೂತ್ರ ಶಾಸ್ತ್ರ. ಅದು ನಿರ್ಣಾಯಕ ಸೂತ್ರವಾದ್ದರಿಂದ ಬಹು ಶಾಖಾನಿರ್ಣಾಯಕತ್ವವನ್ನು ಅದರ ಒಂದೊಂದು ಸೂತ್ರಗಳಿಗೂ ಕೂಡಿಸುವುದಕ್ಕಾಗಿ ಆಧುನಿಕ ಪರಿಭಾಷೆಯ 'ಕ್ಯಾಪ್ಸುಲ್'ನಂತೆ ಅನೇಕಾನೇಕ ಶಾಸ್ತ್ರವಚನಗಳ ಅಭಿಪ್ರಾಯಗಳನ್ನು ಅವುಗಳಲ್ಲಿ ತುಂಬಿಸಲಾಗಿದೆ. ಆದುದರಿಂದ ಒಂದು ಸೂತ್ರವನ್ನು ಪಠಿಸಿ ಸಮರ್ಪಿಸಲಾಯಿತೆಂದರೆ ಆ ಸೂತ್ರದಿಂದ ನಿರ್ಣಯಿಸಲ್ಪಟ್ಟಿರುವ ಹತ್ತಾರು ಶಾಸ್ತ್ರೀಯ ವಚನಗಳನ್ನು ಸಮರ್ಪಿಸಿದಂತಾಗುವುದು. ಈ ದೃಷ್ಟಿಯಿಂದ ಸೂತ್ರಗಳ ಮೂಲಕ ಜ್ಞಾನಪುಷ್ಪಗಳ ಸಮರ್ಪಣೆ ಸಮುಚಿತ.

## ಸೂತ್ರಗಳನ್ನು ಸಮರ್ಪಿಸುವ ಪರಿ

ಸೂತ್ರಗಳನ್ನು ಗಟ್ಟಿಯಾಗಿ ಪಠಿಸಿದಾಕ್ಷಣ ಅವುಗಳ ಸಮರ್ಪಣೆ ನಡೆದಂತಾಗಲಾರದು. ಅದರಿಂದ ಜ್ಞಾನಕಂಪು ಇಲ್ಲದ ಬಾಡಿದ ಸೂತ್ರ ಸುಮಗಳನ್ನಷ್ಟೆ ಸಮರ್ಪಿಸಿದಂತಾದೀತಷ್ಟೆ. ಜ್ಞಾನದ ಕಂಪು ಬೀರುತ್ತಿರುವ ತಾಜಾ ಸೂತ್ರ ಕುಸುಮದ ಅರ್ಪಣೆ ಆಗಬೇಕೆಂದರೆ ಆಯಾಸೂತ್ರದ ಅರ್ಥಾನುಸಂಧಾನಪೂರ್ವಕವಾಗಿ ಸೂತ್ರವನ್ನು ಪಠಿಸುವಂತಾಗಬೇಕು. ಹೀಗೆ ಅರ್ಥಾನುಸಂಧಾನದ ಸೌರಭದಿಂದ ಕೂಡಿರುವ ಸೂತ್ರ ಕುಸುಮಗಳು ಭಗವಂತನ ಶಿರಸ್ಸನ್ನು ಏರಿ ಮೆರೆಯಬೇಕೆಂದರೆ ಸೂತ್ರದ ಅರ್ಥಕ್ಕೂ ಭಗವಂತನಿಗೂ ಇರುವ ನಂಟನ್ನು ವಿವೇಚಿಸಿಕೊಂಡು, ಆ ಸೂತ್ರಾರ್ಥದ ಜ್ಞಾನಕ್ಕೆ ಮುಖ್ಯವಾಗಿ ಭಗವಂತನೇ ವಿಷಯ ಎಂದು ದೃಢಪಡಿಸಿಕೊಳ್ಳುವಂತಾಗಬೇಕು.

## ಅಧಿಕರಣ ನಾಮಾವಳಿಯ ಬಳಕೆ

ಪ್ರತಿಯೊಂದು ಬ್ರಹ್ಮಸೂತ್ರದ ವಿಷಯಕ್ಕೂ ಭಗವಂತನ ಸಂಬಂಧ ಹಚ್ಚಲು

**ಹಾಗೆಂದು ಉಳಿದ ದೇವತೆಗಳಲ್ಲಿ ತಿರಸ್ಕಾರ ಬೇಡ.**



ಶ್ರೀವಾದಿರಾಜಗುರುಗಳು ಎರಡು ವಿಧಾನಗಳನ್ನು ತಿಳಿಸಿಕೊಟ್ಟಿರುವರು. ಪ್ರತಿಯೊಂದು ಸೂತ್ರದ ಆದಿಯಲ್ಲೂ ಅಂತ್ಯದಲ್ಲೂ ಪಠಿತವಾಗುವ ಓಂಕಾರದಿಂದ ಭಗವಂತನ ಗುಣಪೂರ್ಣತ್ವದ ಉಪಕ್ರಮವನ್ನೂ ಉಪಸಂಹಾರವನ್ನೂ ನಡೆಸಲಾಗುವುದೆಂದು ವಿಶ್ಲೇಷಿಸಿಕೊಳ್ಳುವ ಮೂಲಕ ಸೂತ್ರದ ಯಾವುದೇ ಪ್ರಮೇಯ ನೇರವಾಗಿಯಾಗಲೀ, ಪರೋಕ್ಷವಾಗಿಯಾಗಲೀ, ಅವನ ಗುಣಪೂರ್ಣತ್ವಕ್ಕೆ ಪುಷ್ಟೀ ನೀಡುವ ಮೂಲಕ ಅವನಿಗೆ ಸಂಬಂಧಿಸಬಲ್ಲದು. ಹೀಗೊಂದು ವಿಧಾನವಾದರೆ, ಮತ್ತೊಂದು ವಿಧಾನವನ್ನು 'ಅಧಿಕರಣನಾಮಾವಲಿ' ಎಂಬ ಕೃತಿಯ ಮೂಲಕ ತೋರಿಸಿಕೊಟ್ಟಿರುವರು.

## ಅಧಿಕರಣನಾಮಾವಲಿ

ಐನ್ನೂರರ್ವತ್ತನಾಲ್ಕು ಬ್ರಹ್ಮಸೂತ್ರಗಳಲ್ಲಿಯ ಪ್ರತಿಯೊಂದು ಸೂತ್ರಕ್ಕೂ ಅದರ ಪ್ರತಿಪಾದ್ಯಪ್ರಮೇಯದೊಂದಿಗೆ ಭಗವಂತನ ಸಂಬಂಧವನ್ನು ಹಚ್ಚಿ ತೋರಿಸಲು ಹೊರಟಿರುವ ಶ್ರೀವಾದಿರಾಜತೀರ್ಥರ ಕೃತಿ 'ಅಧಿಕರಣನಾಮಾವಲಿ' ಇದರಲ್ಲಿ ಬರೇ ಅಧಿಕರಣದ ಪ್ರಮೇಯದೊಂದಿಗಷ್ಟೇ ಅಲ್ಲದೆ ಪ್ರತಿಯೊಂದು ಸೂತ್ರದ ಪ್ರಮೇಯದ ಜೊತೆಗೆ ಭಗವಂತನ ಸಂಬಂಧವನ್ನು ತೋರಿಸಿಕೊಡಲಾಗುವ ಪ್ರಯುಕ್ತ 'ಬ್ರಹ್ಮಸೂತ್ರನಾಮಾವಲಿ' ಎಂದೂ ಕರೆಸಿಕೊಳ್ಳಲು ಅರ್ಹವಾದ ಕೃತಿ ಇದಾಗಿದೆ. ಸೂತ್ರದಿಂದ ಸಿದ್ಧಾಂತಿಸಲಾಗುವ ಪ್ರಮೇಯವನ್ನು ಆದಷ್ಟು ಸಂಕ್ಷಿಪ್ತವಾಗಿ ಕ್ರೋಢಿಕರಿಸಿ ಆ ಪ್ರಮೇಯಕ್ಕೆ ಭಗವಂತನ ಸಂಬಂಧವನ್ನು ಹಚ್ಚಲಾಗುವುದು.

ಜಿಜ್ಞಾಸಾಸೂತ್ರದ ಸಮರ್ಪಣೆ ವೈಖರಿ ಹೀಗಿದೆ– **'ವಿಶಿಷ್ಟಾಧಿಕಾರಿಕ ಮೋಕ್ಷಫಲಕ ಜಿಜ್ಞಾಸಾಗೋಚರಾಯ ನಮಃ'** ಅಥಶಬ್ದದ ಅರ್ಥ ವಿಶಿಷ್ಟಾಧಿಕಾರಿಕ ವಿಶಿಷ್ಟ ಅಧಿಕಾರಿಗಳುಳ್ಳ ಅತಃಶಬ್ದದ ಅರ್ಥ ಮೋಕ್ಷಫಲಕ–ಮೋಕ್ಷವೇ ಫಲವಾಗಿ ಉಳ್ಳ, ಜಿಜ್ಞಾಸಾ–ಇದಕ್ಕೆ ಗೋಚರನಾಗಿರುವವನೆಂದು ಸೂತ್ರಾರ್ಥಕ್ಕೆ ಭಗವಂತನ ಸಂಬಂಧ ಹಚ್ಚಿ ಅವನಿಗೆ ಆ ಸೂತ್ರವನ್ನು ಸಮರ್ಪಿಸಲಾಗುವುದು.

ಹೀಗೆ ಸಮನ್ವಯಾಧ್ಯಾಯದ ಬೇರೆ ಬೇರೆ ಸೂತ್ರಗಳಲ್ಲಿ ಸಿದ್ಧಾಂತಿಸಲಾದ ಗುಣವುಳ್ಳವನಾಗಿ ಭಗವಂತನಿಗೆ ಆಯಾ ಸೂತ್ರದ ಸಂಬಂಧವನ್ನು ಹಚ್ಚಿದ್ದರೆ, ಅವಿರೋಧಾಧ್ಯಾಯದ ಸೂತ್ರಗಳಲ್ಲಿ ಪರಿಹರಿಸಲಾಗುವ ವಿರೋಧ ಇಲ್ಲದ ಗುಣವುಳ್ಳವನಾಗಿ ಆಯಾ ಸೂತ್ರವನ್ನು ಸಮರ್ಪಿಸಲಾಗುವುದು. **'ಚಾರ್ವಾಕಸಮಯಾ**

**ಎಲ್ಲಾ ದೇವತೆಗಳ ಬಗ್ಗೆ ಚೆನ್ನಾಗಿ ಅರಿತು ಗೌರವಿಸಬೇಕು.**

ವಿರುದ್ಧ ಜಗತ್ಕಾರಣತ್ವವತೇ ನಮಃ' **'ಅಭ್ಯುಪಗಮೇಽಪ್ಯರ್ಥಾಭಾವಾತ್'** (2–2–6) ಎಂಬ ಬ್ರಹ್ಮಸೂತ್ರದಲ್ಲಿ ಚಾರ್ವಾಕ ಮತದ ನಿರಾಕಣೆ ಮಾಡುತ್ತಿದ್ದು, ಅಂತಹ ಚಾರ್ವಾಕ ಸಮಯದ ವಿರೋಧವಿಲ್ಲದ ಜಗತ್ಕಾರಣತ್ವವುಳ್ಳವನಿಗೆ ಪ್ರಣಾಮ ಎಂದು ಆ ಸೂತ್ರವನ್ನು ಸಮರ್ಪಿಸಲಾಗುವುದು.

ಸಾಧನಾಧ್ಯಾಯದ ಸೂತ್ರಗಳನ್ನು ಆಯಾ ಸಾಧನೆಗಳಿಂದ ಗಮ್ಯನಾದವನೆಂದು ಅವನಿಗೆ ಸಮರ್ಪಿಸಲಾಗುವುದು. **'ಭಕ್ತಿ ಪ್ರಯೋಜಕಸ್ವಪ್ನನಿಯಾಮಕತ್ವಮಹಿಮ್ನೇ ನಮಃ'** ಭಕ್ತಿಯನ್ನುಂಟು ಮಾಡುವ, ಸ್ವಪ್ನ ನಿಯಾಮಕತ್ವಮಹಿಮೆ ಉಳ್ಳವನಿಗೆ ಪ್ರಣಾಮ ಎಂದು ಸಂಧ್ಯಾದಿಕರಣವನ್ನು ಸಮರ್ಪಿಸಲಾಗುವುದು. ಫಲಾಧ್ಯಾಯದ ಸೂತ್ರಗಳನ್ನು ಫಲವನ್ನು ಪಡೆದ ಮುಕ್ತರ ನಂಟನ್ನು ಭಗವಂತನಿಗೆ ತೋರಿಸಿಕೊಡುವ ಮೂಲಕ ಸಮರ್ಪಿಸಲಾಗುವುದು. **'ಪುನರಾವೃತ್ತಿ ಶೂನ್ಯ ಸ್ವಪ್ರಾಪ್ತಿವನ್ನು ಕೌಘವೃತಾಯ ನಮಃ'** ಭಗವಂತನ ಪ್ರಾಪ್ತಿ ಪುನರಾವೃತ್ತಿವಾದುದು. ಅಂತಹ ಭಗವತ್ ಪ್ರಾಪ್ತಿವುಳ್ಳವರು ಮುಕ್ತರು. ಅವರ ಸಮೂಹದಿಂದ ಸುತ್ತುವರಿಯಲ್ಪಟ್ಟಿರುವವನು ಭಗವಂತ ಎಂದು **'ಅನಾವೃತ್ತಿಃ ಶಬ್ದಾತ್...'** ಎಂಬ ಸೂತ್ರವನ್ನು ಸಮರ್ಪಿಸಿರುವ ವೈಖರಿ.

## 564 ಸೂತ್ರಸುಮಗಳ ಅರ್ಪಣೆ

ಹೀಗೆ ಶ್ರೀವಾದಿರಾಜಸ್ವಾಮಿಗಳು 564 ಸೂತ್ರಗಳ ಸಿದ್ಧಾಂತಿತ ಪ್ರಮೇಯವನ್ನು ಎತ್ತಿ ತೋರಿಸಿ, ಅದಕ್ಕೆ ಭಗವಂತನ ನಂಟು ಹಚ್ಚಿ ಆಯಾ ಸೂತ್ರಸುಮವನ್ನು ಅವನ ಪಾದಾರವಿಂದಕ್ಕೆ ಸಮರ್ಪಿಸಲು 'ಬ್ರಹ್ಮಸೂತ್ರಾಧಿಕರಣನಾಮಾವಲಿ'ಯ ಮೂಲಕ ಸೌಕರ್ಯವನ್ನು ಒದಗಿಸಿರುವರು. ವೇದವ್ಯಾಸರ ಮೂಲಕವೇ ಹೊರಹೊಮ್ಮಿರುವ ಬ್ರಹ್ಮಸೂತ್ರಗಳ ಆನುಪೂರ್ವಿಗೂ ಮಹತ್ವ ಇದೆ ಎಂದು ಭಾವಿಸುವುದಾದರೆ ಮೊದಲು ಬ್ರಹ್ಮಸೂತ್ರವನ್ನು ಪಠಿಸಿ, ಬಳಿಕ ಶ್ರೀವಾದಿರಾಜತೀರ್ಥರ ಆಯಾ ಸೂತ್ರಕ್ಕೆ ಸಂಬಂಧಿಸುವ ಸೂತ್ರನಾಮಾವಳಿಯನ್ನು ಪಠಿಸಿ ಆಯಾ ಸೂತ್ರಕುಸುಮವನ್ನು ಭಗವಂತನಿಗೆ ಸಮರ್ಪಿಸಬಹುದಾಗಿದೆ.

ಈ ರೀತಿಯಾಗಿ 564 ಶ್ರೇಷ್ಠ ಜ್ಞಾನ ಪುಷ್ಪಗಳ ಸಮರ್ಪಣೆಯಿಂದ ಪೂಜೆಗೆ ದಿವ್ಯ ಕುಸುಮಗಳ ಸೌರಭ ಸಿದ್ಧಿಸುವಂತೆ ಮಾಡಬಹುದಾಗಿದೆ.

★

ಜಗದ್ಗುರು ಮಧ್ವಚಾರ್ಯರಂತಹ ಮಹಾಜ್ಞಾನಿಗಳನ್ನೇ ಗುರುಗಳನ್ನಾಗಿ ಸ್ವೀಕರಿಸಿರಿ





# ಶ್ರೀಹರಿಭಕ್ತಿಸಾರ

–ವಿ॥ ಹಯವದನ ಪುರಾಣಿಕ, ತಿರುಪತಿ

**ಭಾರಕರ್ತನು ನೀನು ಬಹು ಸಂ**
**ಸಾರಿಯೆಂಬುದ ನಿಗಮತತಿ ಕೈ**
**ವಾರಿಸುತ್ತಿದೆ ದಿತಿಜ ಮನುಜ ಭುಜಂಗರೊಳಗಿನ್ನು**
**ಆರಿಗುಂಟು ಸ್ವತಂತ್ರ ನಿನ್ನಂ**
**ತಾರು ಮುಕ್ತಿಯನೀವ ಸದ್ಗುರು**
**ವಾರು ಜಗದಧ್ಯಕ್ಷ ರಕ್ಷಿಸು ನಮ್ಮನನವರತ ॥53॥**

ಭಾರವಾದ ಬ್ರಹ್ಮಾಂಡಕ್ಕೆ ಸೃಷ್ಟಿಕರ್ತ ನೀನೆ, ಶ್ರೀಹರಿ, ನೀನು ಬಲುದೊಡ್ಡ ಸಂಸಾರ ಕಟ್ಟಿಕೊಂಡವನು ಎಂಬುದನ್ನು ವೇದ ಸಮೂಹ ಹೊಗಳುತ್ತಿದೆ. ಇನ್ನು ದಾನವರು ಮಾನವರು ನಾಗರು ಮುಂತಾದವರಲ್ಲಿ ಯಾರಿಗೆ ಸ್ವಾತಂತ್ರ್ಯವಿದೆ? ನಿನ್ನಂತೆ ಯಾರು ಮುಕ್ತಿ ನೀಡುತ್ತಾನೆ? ನಿನ್ನಂತೆ ಸದ್ಗುರುವಾಗಬಲ್ಲವನು ಯಾರಿದ್ದಾನೆ? ಯಾರು ಜಗತ್ತಿಗೆ ಸ್ವಾಮಿ? ನೀನೇ . ನೀನೇ ನಮ್ಮನ್ನು ಸದಾ ಕಾಪಾಡು.

ಭಾರಕರ್ತನು ನೀನು

ಸೃಷ್ಟಿಕರ್ತ ಬ್ರಹ್ಮ ಎಂದು ಪ್ರಸಿದ್ಧ. ಆದರೆ ಆ ಬ್ರಹ್ಮನಿಗೂ ಸೃಷ್ಟಿಕರ್ತನಾದ ತಂದೆ ನೀನು. ನೀನೆ ಬ್ರಹ್ಮಾಂಡ ಸೃಷ್ಟಿಮಾಡಿ ಅದರೊಳಗೆ ಗರ್ಭೋದಕದಲ್ಲಿ ಮಲಗಿ ನಾಭಿ ಕಮಲದಲ್ಲಿ ಬ್ರಹ್ಮನನ್ನು ಸೃಜಿಸಿದೆ. ಮುಂದಿನ ಸೃಷ್ಟಿಕಾರ್ಯವನ್ನು ಅವನಿಗೆ ವಹಿಸಿದೆ, ಅವನೊಳಗೆ ನಿಂತು ಅವನ ಕಾರ್ಯವನ್ನೂ ನೀನೇ ನಿರ್ವಹಿಸಿದೆ!

ಹದಿನಾಲ್ಕು ಲೋಕಗಳಿಂದ ಕೂಡಿದ ಬಲುಭಾರವಾದ ಬ್ರಹ್ಮಾಂಡವನ್ನು ನೀನೇ ಸೃಷ್ಟಿ ಮಾಡಿದೆ. ಮುಂದೆ ಅದರ ರಕ್ಷಣೆಯ ಭಾರವನ್ನು ನಿನ್ನ ಹೆಗಲ ಮೇಲೆಯೇ ನೀನಿರಿಸಿಕೊಂಡೆ.

### ಬಹು ಸಂಸಾರಿ

ನಿನ್ನದು ಬಲು ದೊಡ್ಡ ಸಂಸಾರ–

ಭಗವದ್ಭಕ್ತರಾದ ಸಜ್ಜನರ ಸಂಸರ್ಗವನ್ನು ಎಂದಿಗೂ ಬಿಡಬೇಡಿ.

ಲಕ್ಷ್ಮೀರ್ಯಸ್ಯ ಪರಿಗ್ರಹಃ ಕಮಲಭೂಃ ಸೂನುರ್ಗರುತ್ಮಾನ್ ರಥಃ
ಪೌತ್ರಶ್ಚಂದ್ರವಿಭೂಷಣಃ ಸುರಗುರುಃ ಶೇಷಶ್ಚ ಶಯ್ಯಾ ಪುನಃ ।
ಬ್ರಹ್ಮಾಂಡಂ ವರಮಂದಿರಂ ಸುರಗಣಾಃ ಯಸ್ಯ ಪ್ರಭೋಃ ಸೇವಕಾಃ
ಸ ತ್ರೈಲೋಕ್ಯ ಕುಟುಂಬ ಪಾಲನ ಪರಃ ಕುರ್ಯಾದ್ಧರಿರ್ಮಂಗಳಂ ॥

ಲಕ್ಷ್ಮೀದೇವಿ ನಿನ್ನ ರಾಣಿ. ಚತುರ್ಮುಖ ನಿನ್ನ ಕುಮಾರ. ಗರುಡ, ವಾಹನ, ಸುರಗುರು ಚಂದ್ರಶೇಖರ, ನಿನ್ನ ಮೊಮ್ಮಗ. ಶೇಷ ಹಾಸಿಗೆ. ಬ್ರಹ್ಮಾಂಡವೇ ಅರಮನೆ. ದೇವತೆಗಳೆಲ್ಲ ಪರಿಚಾರಕರು. ಮೂಲೋಕವೇ ನಿನ್ನ ಕುಟುಂಬ. ಅದರ ಪಾಲನೆಯ ಹೊಣೆ ಎಲ್ಲ ನಿನ್ನದು. ಬಲು ದೊಡ್ಡ ಸಂಸಾರವನ್ನು ನೀನು ಸ್ವೇಚ್ಛೆಯಿಂದ ಕಟ್ಟಿಕೊಂಡಿರುವೆ.

## ನಿಗಮತತಿ ಕೈವಾರಿಸುತ್ತಿದೆ

ಯತೋ ವಾ ಇಮಾನಿ ಭೂತಾನಿ ಜಾಯಂತೇ ।
ಯೋ ಬ್ರಹ್ಮಾಣಾಂ ವಿದಧಾತಿ ಪೂರ್ವಂ ।

ಎಂದು ಮುಂತಾಗಿ ವೇದ ಮಂತ್ರಗಳು ಒಕ್ಕೊರಲಿನಿಂದ ನೀನೇ ಜಗತ್ತಿನ ಸೃಷ್ಟಿಕರ್ತ, ನೀನೇ ಜಗದ್ರಕ್ಷಕ, ನೀನೇ ಜಗನ್ನಾಥ ಎಂದು ಹೊಗಳುತ್ತಿದೆ.

## ದಿತಿಜ ಮನುಜ ಭುಜಂಗರೊಳಗಿನ್ನಾರಿಗುಂಟು ಸ್ವತಂತ್ರ:

ದಾನವ ಮಾನವ ನಾಗ ಮುಮತಾದವರೊಳಗೆ ಯಾರಿಗೆ ಈ ಜಗತ್ತಿನ ಸೃಷ್ಟಿ ರಕ್ಷೆ ಮುಂತಾದ ವಿಷಯಗಳಲ್ಲಿ ಸ್ವಾತಂತ್ರ್ಯವಿದೆ? ಮನೆಯ ಯಜಮಾನ ಮನೆಮಂದಿಯನ್ನು ಕಾಪಾಡುವ ಹೊಣೆ ಹೊತ್ತರೂ ಕಾಪಾಡುವಲ್ಲಿ ಅವನು ಸ್ವತಂತ್ರನಲ್ಲ. ನಿನ್ನ ಮೇಲೆ ಭಾರ ಹಾಕಿಯೇ ಮನೆಯನ್ನು ನೋಡಿಕೊಳ್ಳುತ್ತಾನೆ. ಅದರಲ್ಲಿ ಆತ ಯಶಸ್ಸು ಕಾಣುವುದು ಬಿಡುವುದು ನಿನ್ನ ಅಧೀನ.

## ನಿನ್ನಂತಾರು ಮುಕ್ತಿಯ ನೀವ ಸದ್ಗುರು

ಹುಟ್ಟಿಸಿದ ದೇವ ನೀನೇ ಮುಕ್ತಿಯನ್ನು ನೀಡಬೇಕು. ಏಕೆಂದರೆ ನೀನು ಹುಟ್ಟಿಸುವುದು ಅನಾದಿ ಅಜ್ಞಾನದ ಅಂಧಕಾರದಲ್ಲಿ ಮುಳುಗಿರುವ ಚೇತನರನ್ನು



ಸುಜ್ಞಾನದ ಬೆಳಕಿನತ್ತ ಒಯ್ದು ಮುಕ್ತಿ ನೀಡುವುದಕ್ಕಾಗಿ ತಾನೆ? ಹೀಗಾಗಿ ಹುಟ್ಟಿಸುವವನೂ ನೀನೆ, ಜ್ಞಾನ ನೀಡುವವನೂ ನೀನೆ, ಮುಕ್ತಿ ನೀಡುವನೂ ನೀನೆ, ಅನ್ಯರಿಗೆಲ್ಲಿದೆ ಸ್ವಾತಂತ್ರ್ಯ? ಅವರು ಮುಚುಕುಂದ ಮಹಾರಾಜನಿಗೆ ಹೇಳಿದ ಮಾತು ಇದು–

ವರಂ ವರಯ ಭದ್ರಂ ತೇ ಋತೇ ಕೈವಲ್ಯಮಾತ್ಮನಃ
ಏಕ ಏವೇಶ್ವರಸ್ತಸ್ಯ ಭಗವಾನ್ ವಿಷ್ಣುರವ್ಯಯಃ ॥

'ಮುಕ್ತಿಯೊಂದನ್ನು ಬಿಟ್ಟು ಬೇರೇನನ್ನಾದರೂ ವರವನ್ನು ನಮ್ಮಲ್ಲಿ ಕೇಳಿ ಕೊಳ್ಳು. ನಾವು ಕೊಡಬಲ್ಲೆವು. ಮುಕ್ತಿ ಕೊಡುವುದರಲ್ಲಿ ಮಾತ್ರ ನಿತ್ಯಮುಕ್ತನಾದ ಭಗವನಾನ್ ವಿಷ್ಣು ಒಬ್ಬನೇ ಶಕ್ತ'.

ಮುಕ್ತಿಯ ನೀವ ಸದ್ಗುರು ನೀನೆ. ಜ್ಞಾನದ ಸೆಲೆಯಾದ ಅಪೌರುಷೇಯವಾದ ವೇದವನ್ನು ಸೃಷ್ಟಿಯ ಆದಿಯಲ್ಲಿ ಲೋಕಕ್ಕೆ ಉಪದೇಶಿಸಿದವನು ನೀನು. ಬ್ರಹ್ಮಸೂತ್ರಗಳನ್ನು ರಚಿಸಿ ವೇದದ ತಿರುಳನ್ನು ತಿಳಿಸಿ ಹೇಳಿದ ವೇದವ್ಯಾಸ ನೀನು. ನಿನ್ನಂತೆ ಸದ್ಗುರುವಾಗ ಬ್ಲವನು ಯಾರಿದ್ದಾನೆ? ನಿನ್ನಂತೆ ಮುಕ್ತಿ ನೀಡುವವನು ಇನ್ನಾರಿದ್ದಾನೆ?

## ಆರು ಜಗದಧ್ಯಕ್ಷ

ನಿನ್ನಂಥ ಜಗನ್ನಾಥ ನಿನ್ನಾರು? ಹೊರಗಿನ ಪ್ರಪಂಚವನ್ನು ಮಾತ್ರವಲ್ಲದೆ, ಎಲ್ಲರ ಮನದೊಳಗಿನ ಪ್ರಪಂಚವನ್ನೂ ಕಾಣುವ ಸರ್ವಸಾಕ್ಷಿ, ಅಧ್ಯಕ್ಷ ನೀನೇ. 'ನಾನು ನಾನು ನಾನೆಂದು' ಎಲ್ಲರೂ ತಮ್ಮನ್ನು ತಾವು ಕಂಡುಕೊಳ್ಳುವುದೇ ನಿನ್ನಿಂದ. ಕಂಡು ತಮ್ಮ ಮೋಕ್ಷವನ್ನು ತಾವು ಗಳಿಸಿ ಕೊಳ್ಳುವುದು ನಿನ್ನಿಂದ. ಎಲ್ಲರ ಅಂತರ್ಯಾಮಿ ನೀನು. ಅನ್ಯರಿಗೆಲ್ಲಿದೆ ಸ್ವಾತಂತ್ರ್ಯ?

## ರಕ್ಷಿಸು ನಮ್ಮನನವರತ

ಒಂದು ಕ್ಷಣ ನೀನು ನಮ್ಮನ್ನು ಕಾಪಾಡದೆ ಸುಮ್ಮನೆ ಕುಳಿತೆ ಎಂದರೆ ನಾವು ನಾವಲ್ಲ ವಾದೇವು, ಇಲ್ಲವಾದೇವು. ಅನವರತ ಕಾಪಾಡುವಿ. ಅದರಿಂದ ನಾವು ನಾವಾಗಿದ್ದೇವೆ, ಇದ್ದೇವೆ. ಅದರಿಂದ ಅನವರತ ನಮ್ಮನ್ನು ಕಾಪಾಡುತ್ತಿರು. ★

–ಡಾ। ಎನ್. ವೆಂಕಟೇಶ ಆಚಾರ್ಯ, ಬೆಂಗಳೂರು

~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

*(ಹಿಂದಿನ ಸಂಚಿಕೆಯಿಂದ ಮುಂದುವರಿದುದು..........)*

ನಾವು ನಮ್ಮ ದೃಷ್ಟಿಗಿಂತ ನಚಿಕೇತನಾಗಿ ನೋಡೋಣ. ನಚಿಕೇತ ಸತ್ತು ಯಮನ ಬಳಿ ಬಂದಿದ್ದಾನೆ. ಅವನಿಗೆ ಸನ್ಮಾನವೂ ಆಗಿದೆ. ಈಗ ಪ್ರಶ್ನೆಯನ್ನೂ ಕೇಳುತ್ತಿದದಾನೆ ಎಂದ ಮೇಲೆ ಸತ್ತ ಮೇಲೆ ಜೀವ ಇರುವ ಸಂಗತಿ ಸುತರಾಂ ಅವನಿಗೆ ಖಾತರಿ ಆಗರಿಬೇಕಲ್ಲವೇ? ಹೀಗಾಗಿ ಜೀವನ ಬಗೆಗಿನ ಪ್ರಶ್ನೆ ಎಂಬ ಮಾತೇ ನಿರ್ಜೀವ ಎನಿಸುತ್ತದೆ.

ಇನ್ನು ಪ್ರಶ್ನೆಯನ್ನು ನಚಿಕೇತನ ಕಣ್ಣಿನಿಂದ ಬೇಡ. ಯಮನ ದೃಷ್ಟಿಯಿಂದ ಕಾಣೋಣ. ಪ್ರಶ್ನೆಯು ಬಯಲಾಗುವುದು ಉತ್ತರದಿಂದ. ಮುಂದೆ ಯಮನು ಉತ್ತರಿಸುತ್ತಾ **'ಅಣೋರಣೀಯಾನ್ ಮಹತೋ ಮಹೀಯಾನ್ ಆತ್ಮಾಸ್ಯ ಜಯೋರ್ನಿಹಿತೋ ಗುಹಾಯಾಮ್'** ಎಂಬಲ್ಲಿ ಅಣುವಿಗಿಂತ ಅಣು ಮಹತ್ತಿಗಿಂತ ಮಹತ್ತು ಆ ಆತ್ಮ ಎಂಬ ಬಣ್ಣನೆಯಿದೆ. ಜೀವನು ಮಹತ್ತಿಗಿಂತ ಮಹತ್ತು ಆಗಲಾರ. ಅಣುತರನೂ ಆಗಲಾರ. ಅವನು ಅಣು ಮಾತ್ರ ಎಂಬುದರಲ್ಲಿ ವೇದಾಂತಿಗಳನ್ನು ಗೊಂದಲವಿಲ್ಲ. ಹೀಗಿರುವಾಗ ಅದು ಒಗ್ಗುವುದಾದಲ್ಲಿ ಭಗವಂತನೊಬ್ಬನಿಗೆ ಆಗಬೇಕಲ್ಲವೇ?

ಮುಂದೆ ಯಥಾ ಹಿ ಮರಣಂ ಪ್ರಾಪ್ಯ ಆತ್ಮಾ ಭವತಿ ಗೌತಮ ಎಂಬಲ್ಲಿಯೂ ಮೃತಜೀವನಿಯಾಮಕನಾದ ಹರಿಯ ಮಹಿಮೆಯೇ ಒಂದಿದೆ.

'ಯ ಏಷು ಸುಪ್ತೇಷು ಜಾಗರ್ತಿ ಕಾಮಂ ಕಾಂ ಪುರುಷೋ ನಿರ್ಮಮಾಣಃ' ಎಂಬಲ್ಲಿ ಈ ಜೀವರೆಲ್ಲಾ ಮಲಗಿರುವಾಗ ಸ್ವಪ್ನನಿರ್ಮಾಣ ಮಾಡುವ ಕೌಶಲವನ್ನು ಕೊಂಡಾಡಿರುವ ವಿಷಯ ಬಂದಿದೆ. ಅದು ಭಗವಂತನಿಗೆ ಮೀಸಲಾದ ಮಹಿಮೆ ಅಲ್ಲವೆ?

ಅಸ್ಯ ವಿಸ್ರಂಸ್ಯ ಮಾನಸ್ಯ ಶರೀರಸ್ಥಸ್ಯ ದೇಹಿನಃ ದೇಹಾದ್ವಿಮುಚ್ಯ ಮಾನಸ್ಯ ಎಂಬಲ್ಲಿ ಬಿಡುವಿದೆ ಎರಡು ಭಾರಿ ಬಂದಿದೆ ಒಂದು ಸ್ಥೂಲ ದೇಹದ್ದು, ಮತ್ತೊಂದು ಸ್ವರೂಪ ದೇಹದ್ದು ಆಗಬೇಕು. ಇದು ಮುಕ್ತಿಯ ಅವಸ್ಥೆಯೇ ಅಲ್ಲವೇ?



ಹೀಗಾಗಿ ಮುಕ್ತ ನಿಯಾಮಕತ್ವದ ಬಗೆಗೆ ಮುಕ್ತ ಚರ್ಚೆ ನಡೆದಿದೆ ಎನ್ನಬೇಕಲ್ಲವೇ?

ಇನ್ನು ಮನುಷ್ಯ ಎಂಬ ಮತ್ತೊಂದು ಶಬ್ದ. ನರನು ಪ್ರೇತನಾದಾಗ ಎನ್ನದೇ ಮನುಷ್ಯ ಪ್ರೇತನಾದಾಗ ಎಂದೇ ಉಪನಿಷತ್ತು ಉಲ್ಲೇಖಿಸಿದೆ. ಮನುಷ್ಯ ಎಂಬ ಶಬ್ದ ಮನು ಅವಬೋಧನೇ ಧಾತುವಿನಿಂದ ಆಗಿದ್ದು ಜ್ಞಾನಿ ಎಂಬ ಅರ್ಥದಲ್ಲಿ ಬಳಸಲ್ಪಟ್ಟದ್ದು.

ಇನ್ನು ಪ್ರೇತ ಎಂಬ ಶಬ್ದ. ಇತ ಎಂದರೆ ಪ್ರಯಾಣ ಮಾಡಿದವ ಎಂದರ್ಥ. ಪ್ರ + ಇತ ಎಂದಾಗಿ ಇಣ ಗತೌ ಧಾತುವಿನಿಂದ ಮೂಡಿದೆ. ಹೀಗಾಗಿ ಅಂತಿಮವಾದ ಪ್ರಯಾಣ ಹಿಂತಿರುಗುವುದರ ಪ್ರಯಾಣ ಎಂದರೆ ಮುಕ್ತಿ ಎಂದೇ ಅಲ್ಲವೇ?

ಮುಂದೆ 'ಸ್ತೋಮ ಮಹದುರುಗಾಯಂ ಪ್ರತಿಷ್ಠಾ' ಎಂಬಲ್ಲಿ ಉರುಗಾಯ ದೇವತೆಗಳಿಂದ ದಾನಮಾಡಲ್ಪಡುವ ಗರಿಮೆಯುಳ್ಳವನು ಎಂದಿದ್ದಾನೆ. ಈ ಪರಿಯ ಸೊಬಗು ಕ್ಷುದ್ರಜೀವನಿಗೆ ಕೂಡೀತೇ?

ಒಟ್ಟಿನಲ್ಲಿ ಎತ್ತರದ ಪರಿಶೀಲನೆಯಿಂದ ಪ್ರಶ್ನೆಯು ಭಗವಂತನ ಬಗೆಗೆ ಎಂಬುದು ಬೆಳಕಿನಷ್ಟು ಸ್ಪಷ್ಟ. ನಚಿಕೇತನಿಗೆ ಇದು ಸಮ್ಮತವಲ್ಲವಾಗಿದ್ದರೆ ಮುಂದೆ ನಿರಾಕರಣೆಯಿರಬೇಕಿತ್ತಲ್ಲವೇ?

**'ಯ ಏ ಸುಪ್ತೇಷಿ ಜಾಗರ್ತಿ'** ಎಂಬಲ್ಲಿ ಇಂದ್ರಿಯಗಳೆಲ್ಲಾ ಮಲಗಿರುವಾಗ ಎಚ್ಚೆತ್ತಿರುವ ಜೀವ ಎಂಬರ್ಥ ಮಾಡಿ ಜೀವಪರವಾಗಿ ಶ್ಲೋಕವನ್ನು ಜಾರಿಸಿಬಿಡುವ ಅಪಾಯ ಇದ್ದೇ ಇದೆ. ಅದಕ್ಕಾಗಿ 'ಸ್ಥಾಣುಮನ್ಯೇ ನು ಸಂಯಂತಿ ಯಥಾ ಕರ್ಮ ಅಥಾ ಶೃತಂ' ಎಂದ ಕರ್ಮದ ಫಲಕ್ಕಾಗಿ ಚೇತನ ಅಥವಾ ಸ್ಥಾವರ ಜನ್ಮ ಪಡೆಯುತ್ತಾರೆ ಎಂಬ ಈ ವಾಕ್ಯ ಜೀವಪರ ಎಂದ ಮೇಲೆ ಸುತ್ತರಾದವರು ಜೀವರೇ ಆಗಬೇಕು. ಆಗ ಜಾಗರಣವು ಭಗವಂತನಿಗೆ ಸೂಕ್ತ ಅಲ್ಲವೇ?

ಮರಣಂ ಮಾನುಪ್ರಾಕ್ಷೀಃ ಮರಣದ ಬಗೆಗೆ ಕೇಳಬೇಡ ಎಂಬ ಯಮನ ಮಾರ್ನುಡಿ ಸರಿಯಲ್ಲ. ಮರಣವು ಸರ್ವಾನುಭಾವ ಸಿದ್ಧ. ಅಲ್ಲಿ ಪ್ರಶ್ನೆಯೂ ಬಾರದು. ಮರಣಂ ಎಂದರೆ ಮೃತನಲ್ಲಿ ಇರುವ ಭಗವಂತ ಎಂದೇ ಅದರ ಅರ್ಥ.

ಲೌಕಿಕ ಪ್ರಪಂಚದಲ್ಲಿ ಸತ್ತರೇ ಕಥೆ ಮುಗಿಯಿತು. ಚರ್ಚೆ ಮುಗಿದಂತೆ. ಅಧ್ಯಾತ್ಮದಲ್ಲಿ ಸತ್ತನಂತರವೂ ಜೀವನ ಗತಿ ನಿಯಂತ್ರಿಸುವ ಆ ಶಕ್ತಿಯ ಬಗೆಗಿನ ಚರ್ಚೆ ಸಾಯದು. ಅದಕ್ಕಾಗಿಯೇ ಇದನ್ನು ತತ್ವಜ್ಞಾನ ಎನ್ನುತ್ತಾರೆ.

ಸಶೇಷ
~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

ಮುಖಪುಟ ಲೇಖನ

## ಘಟಿಕಾಚಲದಿ ನಿಂತ ಶ್ರೀಹನುಮಂತ

“ಘಟಿಕಾಚಲದಿ ನಿಂತ ಶ್ರೀಹನುಮಂತ”ಎಂದು ಘಟಿಕಾಲಚದ ಪ್ರಾಣದೇವರನ್ನು ದಾಸರು ಕೊಂಡಾಡಿದ್ದಾರೆ. ಆದರೆ ಘಟಿಕಾಚಲದಲ್ಲಿರುವ ಪ್ರಾಣದೇವರು ಕುಳಿತ ಭಂಗಿಯಲ್ಲಿ ಇರುವುದು ದಾಸರೇಕೆ ನಿಂತ ಎಂದು ಹಾಡಿದರು, ಎಂಬ ಪ್ರಶ್ನೆ ಬಂದರೆ ಭಕ್ತರಿಗೆ ಅನುಗ್ರಹವನ್ನು ಮಾಡುವುದ್ದಕ್ಕಾಗಿ ಕಟಿಬದ್ಧನಾಗಿ ಇರುವವ ಎಂಬುದನ್ನು ತಿಳಿಸುವುದಕೊಸ್ಕರ ದಾಸರು ಘಟಿಕಾಚಲದಿ ಕುಳಿತ ಎನ್ನದೇ ಘಟಿಕಾಚಲದಿ ನಿಂತ ಎಂದು ಹೊಗಳಿದ್ದಾರೆ.

ಹರಿ–ವಾಯುಗಳ ಬಿಂಬಪ್ರತಿಬಿಂಬಭಾವ ಈ ಸ್ಥಳದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಶಾಸ್ತ್ರದಲ್ಲಿ “ಆಭಾಸಕೋऽಸ್ಯ ಪವನಃ” ಎನ್ನುವುದು ಇಲ್ಲಿ ಸುಸ್ಪಷ್ಟವಾಗಿದೆ. ಬಿಂಬನಾದ ನರಸಿಂಹದೇವರು ಶಂಖ–ಚಕ್ರವನ್ನು ಹಿಡಿದುಕೊಂಡ ಯೋಗಭಂಗಿಯಲ್ಲಿ ಕುಳಿತಿದ್ದರೆ ಪ್ರತಿಬಿಂಬನಾದ ವಾಯುದೇವರೂ ಶಂಖ–ಚಕ್ರವನ್ನು ಹಿಡಿದುಕೊಂಡು ಅದೇ ರೀತಿಯ ಯೋಗಭಂಗಿಯಲ್ಲಿ ಕುಳಿತ್ತಿದ್ದಾರೆ. “ಕೃಂತತೀತಿ ಚಕ್ರಂ–ಶಂ ಖನತೀತಿ ಶಂಖಃ” ಭಕ್ತರ ಕಷ್ಟಗಳನ್ನು ಪರಿಹರಿಸಲು ಹಾಗೂ ಸುಖವನ್ನು ಕೊಡಲು ಚಕ್ರ–ಶಂಖಗಳನ್ನು ಭಗವಂತ ಧಾರಣೆಮಾಡಿದ್ದಾನೆ. ಸರ್ವಪ್ರಹರಣಾಯುಧನಾದ ಭಗವಂತನಿಗೆ ಯಾವುದೇ ಆಯುಧಗಳ ಅಗತ್ಯವಿಲ್ಲ. ಪ್ರತಿಬಿಂಬನಾದ ವಾಯುದೇವರಿಗೂ ಆಯುಧಗಳ ಅಗತ್ಯವಿರುವುದಿಲ್ಲ. “ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ” ಎಂಬ ಮಾತಿಗನುಗುಣವಾಗಿ ಹಿರಿಯರನ್ನು ಅನುಸರಿಸಬೇಕು ಎನ್ನುವುದನ್ನು ತಿಳಿಸುವುದಕೋಸ್ಕರ ಭಗವಂತನಂತೆಯೇ ಆಯುಧಗಳನ್ನು ಹಿಡಿದುಕೊಂಡು ಅದೇ ಭಂಗಿಯಲ್ಲಿ ಕುಳಿತು ಸಾಧನೆಯನ್ನು ಮಾಡುತ್ತಿದ್ದಾರೆ. ಘಟಿಕಾ(ಘಳಿಗೆ)ಮಾತ್ರದಲ್ಲಿ ಭಗವಂತ ಇಲ್ಲಿ ಒಲಿದಿದ್ದಾನೆ. ಅಚಲವಾಗಿ ಕುಳಿತು ಸಾಧನೆ ಮಾಡಿದರೆ ಘಟಿಕಮಾತ್ರದಲ್ಲಿ ಭಗವಂತನನ್ನು ಒಲಿಸಿಕೊಳ್ಳಲು ಸಾಧ್ಯ ಎಂಬುದನ್ನು ಸಾಧಕೋತ್ತಮರಾದ ವಾಯುದೇವರು ತೋರಿಸಿಕೊಟ್ಟಿದ್ದಾರೆ. ಇಂತಹ ಹರಿವಾಯುಗಳು ನಮ್ಮಲ್ಲೂ ಉತ್ತಮವಾದ ಸಾಧನೆಯನ್ನು ನಡೆಸಿ ತತ್ಕಕ್ಷಣದಲ್ಲಿ(ಘಟಿಕ) ಫಲವನ್ನು ನೀಡಲಿ ಎಂಬುದಾಗಿ ಹರಿವಾಯುಗಳಲ್ಲಿ ಪ್ರಾರ್ಥಿಸೋಣ.

ಮನೆಯ ಮುಂದೆ ಶ್ರೀ ತುಳಸಿಯ ವನ ಕಂಗೊಳಿಸುತ್ತಿರಲಿ





# ಶ್ರೀ ಮಹಾಭಾರತ

ಭಾಗ: 1

–ವಿ॥ ರಾಮವಿಟ್ಠಲಾಚಾರ್ಯ ಬೆಂಗಳೂರು

ಮಹಾಭಾರತ ಭಗವಾನ್ ವೇದವ್ಯಾಸರ ಮಹಾಕೃತಿ. ಪುರಾತನ ಭಾರತೀಯ ಸಂಸ್ಕೃತಿ ತತ್ವಜ್ಞಾನಗಳ ತವನಿಧಿ. ಬ್ರಹ್ಮ ಮೊದಲಾದ ದೇವತೆಗಳ ಪ್ರಾರ್ಥನೆಯಂತೆ ನಾರಾಯಣನೇ ವೇದವ್ಯಾಸರಾಗಿ ಅವತರಿಸಿದನು. ವೇದಗಳನ್ನು ನಾಲ್ಕು ಭಾಗವಾಗಿ ವಿಂಗಡಿಸಿ ಅದರ ಅರ್ಥ ನಿರ್ಣಯಕ್ಕೆ ಬ್ರಹ್ಮಸೂತ್ರಗಳೆಂಬ ಗ್ರಂಥವನ್ನೂ ಬರೆದರು. ಆದರೂ ವೇದ ಅರ್ಥವಾಗದವರು ವೇದ ಓದಲಾಗದ ಸ್ತ್ರೀ ಮೊದಲಾದ ಸಜ್ಜನರು ಇವರಿಗಾಗಿ ವೇದವ್ಯಾಸರೇ ರಚನೆ ಮಾಡಿದ ಪಂಚಮ ವೇದ ಮಹಾಭಾರತ. ವೇದದಲ್ಲಿ ಹೇಳಿದ ಹೇಳದ ಭಗವಂತನ ಬುದ್ಧಿಯಲ್ಲಿರುವ ಅನೇಕ ವಿಷಯಗಳನ್ನು ಒಳಗೊಂಡ ಮಹಾಕೃತಿ ಮಹಾಭಾರತ. ತಕ್ಕ ಮಟ್ಟಿಗೆ ಅವರವರಿಗೆ ಸ್ವಲ್ಪ ಎಲ್ಲರಿಗೂ ಅರ್ಥವಾಗುತ್ತದೆ. ಇಡಿಯಾಗಿ ಚತುರ್ಮುಖಬ್ರಹ್ಮನಿಗೂ ಅರ್ಥವಾಗದ ಗಹನ ಗ್ರಂಥ.

ಸಮಸ್ತಶಾಸ್ತ್ರಗಳಲ್ಲಿ ಸರ್ವೋತ್ತಮಗ್ರಂಥ ಮಹಾಭಾರತ. ಇದು ಬರೀ ಮಾತಲ್ಲ. ಹಿಂದೊಮ್ಮೆ ವ್ಯಾಸರ ಆಜ್ಞೆಯಿಂದಲೇ ಮಹಾಭಾರತವನ್ನು ಇತರ ವೇದಾದಿಶಾಸ್ತ್ರಗಳನ್ನು ತಕ್ಕಡಿಯಲ್ಲಿ ತೂಗಲಾಯಿತು. ಒಂದು ಮಣೆಯಲ್ಲಿ ಮಹಾಭಾರತದ ಅಭಿಮಾನಿದೇವತೆಗಳನ್ನು ಮತ್ತೊಂದು ಮಣೆಯಲ್ಲಿ ಇತರೆಲ್ಲ ಶಾಸ್ತ್ರಗಳ ಅಭಿಮಾನಿದೇವತೆಗಳನ್ನು ಆವಾಹಿಸಿ ತೂಗಿದರು. ಅರ್ಥ ಹಾಗೂ ಆವಾಹಿತದೇವತೆಗಳ ಭಾರದಿಂದ ಕೆಳಗೇ ಕೂತು ಎಲ್ಲವನ್ನೂ ಮೀರಿ ನಿಂತಿತು ಮಹಾಭಾರತ. ಬ್ರಹ್ಮಾದಿ ದೇವತೆಗಳ ಪ್ರಾರ್ಥನೆಯಂತೆ ಅವತರಿಸಿ ಕೇವಲ ತತ್ವನಿರ್ಣಯಕ್ಕಾಗಿ ಮಹಾಭಾರತವನ್ನು ರಚನೆ ಮಾಡಿದರು. ಕಡಿಮೆಯೆಂದರೆ ಹತ್ತು ಅರ್ಥ ಭಾರತದ ಪ್ರತಿಯೊಂದು ಮೂಲೆಗೂ ಇದೆ. ಸಮಸ್ತ ವೇದಗಳ ಸಾರವೂ ತುಂಬಿದೆ. ಇಲ್ಲಿರುವ ವಿಷಯಗಳೇ ಬೇರೆ ಗ್ರಂಥಗಳಲ್ಲಿ. ಇಲ್ಲಿ ಹೇಳದಿರುವ ವಿಷಯ ಬೇರೆ ಯಾವ ಗ್ರಂಥದಲ್ಲಿಯೂ ಇಲ್ಲ. ಇದು ಮಹಾಭಾರತದ ಹೆಗ್ಗಳಿಕೆ.

ಮಹಾಭಾರತಕ್ಕೆ ಮೂರು ಬಗೆಯ ಅರ್ಥಗಳು. ಮನ್ವಾದಿ, ಆಸ್ತೀಕಾದಿ, ಉಪರಿಚರಾದಿ. ಮನು ಎಂದರೆ ಪರಮಾತ್ಮನ ಜ್ಞಾನಕ್ಕೆ ಕಾರಣವಾದುದು. ಅಂದರೆ ಧರ್ಮ, ಭಕ್ತಿ, ಜ್ಞಾನ, ವೈರಾಗ್ಯ, ಪ್ರಜ್ಞಾ, ಮೇಧಾ, ಧೃತಿ, ಸ್ಥಿತಿ, ಯೋಗ, ಪ್ರಾಣ, ಬಲ, ಶ್ರವಣ, ಮನನ, ಧ್ಯಾನ, ಶೀಲ, ವಿನಯ, ವೇದ ಈ ಹದಿನೇಳು ಗುಣಗಳು. ಧರ್ಮಕ್ಕೆ ಅಭಿಮಾನಿ ಧರ್ಮರಾಜ. ಭಕ್ತಿಯಿಂದ ಬಲದವರೆಗಿನ ಹತ್ತು ಗುಣಗಳ ಅಭಿಮಾನಿ ಭೀಮಸೇನ. ಶ್ರವಣಾದಿ

ಎಂದಿಗೂ ನಾಸ್ತಿಕರಾಗಬೇಡಿ; ನಾಸ್ತಿಕವಾದಕ್ಕೆ ತಲೆಬಾಗಬೇಡಿ.

ಮೂರುಗುಣಗಳ ಅಭಿಮಾನಿ ಅರ್ಜುನ. ಶೀಲ ಮತ್ತು ವಿನಯಗಳ ಅಭಿಮಾನಿಗಳು ನಕುಲ ಸಹದೇವರು. ವೇದಾಭಿಮಾನಿನಿ ದ್ರೌಪದಿ. ಯುಧಿಷ್ಟಿರಾದಿಗಳ ಚರಿತ್ರೆಯ ಮೂಲಕ ಈ ಸದ್ಗುಣಗಳ ಮಹಿಮೆಯನ್ನೇ ಮಹಾಭಾರತವು ಹೇಳುತ್ತದೆ. ಇದು ಮನ್ವಾದಿ ಅರ್ಥ. ಇದು ಭಾರತದ ಒಂದು ಮುಖ.

"ಆಸ್ತೀಕಾದಿ' ಇದು ಮಹಾಭಾರತದ ಮತ್ತೊಂದು ಮುಖ. ಕೃಷ್ಣ ರಕ್ಷಿತರಾದ ಆಸ್ತಿಕರಾದ ಪಾಂಡವರು, ದ್ರೌಪದಿ ಹಾಗೂ ಕೌರವರ ಚರಿತ್ರೆಗಳೇ ಆಸ್ತೀಕಾದಿ.

ಉಪರಿಚರ ಎಂದರೆ ಎಲ್ಲರಿಗಿಂತ ಮೇಲಿರುವ ಸರ್ವೋತ್ತಮನಾದ ಭಗವಾನ್ ವಿಷ್ಣು. ಮಹಾಭಾರತ ಪ್ರತಿಯೊಂದು ಸ್ವರ ಪದ, ವಾಕ್ಯಗಳೂ ಭಗವಂತನ ಮಹಿಮೆಯನ್ನು ಹೇಳುತ್ತದೆ. ಇದು ಮಹಾಭಾರತದ ಉಪರಿಚರಾದಿ ಎಂಬ ಮುಖ್ಯವಾದ ಮುಖ.

ಮಹಾಭಾರತದ ಮನ್ವಾದಿ ಮುಖದ ಸಾರವೇ ಭಗವದ್ಗೀತೆ. ಮಹಾಭಾರತದ ಉಪರಿಚರಾದಿ ಮುಖದ ಸಾರವೇ ವಿಷ್ಣುಸಹಸ್ರನಾಮ. ಆದ್ದರಿಂದಲೇ ಸರ್ವಶಾಸ್ತ್ರಗಳಲ್ಲಿ ಮಹಾಭಾರತ ಸಾರ. ಮಹಾಭಾರತದಲ್ಲಿ ಭಗವದ್ಗೀತೆ ಮತ್ತು ವಿಷ್ಣುಸಹಸ್ತ್ರನಾಮಗಳು. ಅವರೆಡನ್ನೂ ಪ್ರತಿನಿತ್ಯವೂ ಓದಬೇಕು, ಅರಿಯಬೇಕು.

ಇನ್ನು ಕೌರವರು ಯಾರು? ಅಜ್ಞಾನಭ್ರಮ ಪ್ರಮಾದ ಮುಂತಾದ ದೋಷಗಳ ಸ್ವರೂಪನೇ ಕಲಿದುರ್ಯೋಧನ. ವಿಪರೀತ ಜ್ಞಾನವೇ ದುಃಶ್ಯಾಸನ. ನಾಸ್ತಿಕವೇ ಶಕುನಿ. ಧೃತರಾಷ್ಟ್ರನ ಬೇರೆ ಪುತ್ರರು ಇತರ ದೋಷಸ್ವರೂಪರು. ಎಲ್ಲ ಪಾಪಗಳ ಸ್ವರೂಪರು ಕೌರವರ ಸೈನಿಕರು.

ರುದ್ರನ ಅವತಾರನಾದ ಅಶ್ವತ್ಥಾಮ ಅಹಂಕಾರ ಸ್ವರೂಪ. ದ್ರೋಣಾದಿಗಳು ಇಂದ್ರಿಯಸ್ವರೂಪರು. ಪಾಂಡವರ ಸೈನಿಕರು ಪುಣ್ಯಸ್ವರೂಪರು. ಇವೆಲ್ಲಕ್ಕೂ ನಿಯಾಮಕನಾದ ವಿಷ್ಣುವೇ ಶ್ರೀಕೃಷ್ಣ.

ಹೀಗೆ ಸಮಗ್ರ ಮಹಾಭಾರತವೇ ಅಧ್ಯಾತ್ಮಾರ್ಥಗರ್ಭಿತ. ಈ ಮಹಾಭಾರತ ಸಾವಿರಾರು ವರ್ಷಗಳ ಹಿಂದೆ ನಡೆದು ಹೋದ ಘಟನೆಗಳ ಕಂತೆಯಲ್ಲ. ನಮ್ಮೆಲ್ಲರ ಒಳಗೆ ಪ್ರತಿನಿತ್ಯ ಪ್ರತಿಕ್ಷಣ ನಡೆಯುವ ಸಂಗತಿಗಳು. ಸಂಜೆ ಹೊತ್ತಿನಲ್ಲಿ ಯಾವುದೇ ಮನೋರಂಜನೆಯ ಕಾರ್ಯಕ್ರಮ ನೋಡುವ ಕಾತರದಿಂದ ಕೂಡುತ್ತೇವೆ. ಅದೇ ಕಾಲಕ್ಕೆ ಅತ್ತ ಮಹಾಭಾರತ ಪ್ರವಚನವೂ ನಡೆದಿರುತ್ತೆ. ಮನಸ್ಸಿನಲ್ಲಿ ಮನೋರಂಜನೆಯ ಧಾರವಾಹಿ ನೋಡಬೇಕೋ ಪ್ರವಚನಕ್ಕೆ ಹೋಗಬೇಕೋ ಎಂಬ ಹೋಯ್ದಾಟ ಶುರುವಾಗುತ್ತದೆ. ಇದು ಕುರುಕ್ಷೇತ್ರದ ಯುದ್ಧ. ನಮ್ಮ ಜೀವನರಥದ ಸಾರಥ್ಯ ಕೃಷ್ಣನಿಗೆ ಒಪ್ಪಿಸಿದರೆ ನಮ್ಮಲ್ಲಿರುವ ಸದ್ಗುಣಗಳಿಗೆ ಜಯ. ವಿರುದ್ಧ ನಿಂತರೆ ದುರ್ಗುಣಗಳಿಗೆ ಜಯ.

ಮಹಾಭಾರತ ಪುರಾಣಗಳು ಕೇವಲ ವ್ಯಕ್ತಿಗಳ ಕಥೆಯಲ್ಲ. ವ್ಯಕ್ತಿತ್ವಗಳ ಕಥೆ. ವ್ಯಕ್ತಿಗಳು ತತ್ಕಾಲದವರಾಗಿರಬಹುದು. ವ್ಯಕ್ತಿತ್ವಗಳು ಸಾರ್ವಕಾಲಿಕ. ಆದ್ದರಿಂದಲೇ ಮಹಭಾರತ ಎಲ್ಲ ಕಾಲಕ್ಕೂ ಪ್ರಸ್ತುತ.

**ಜೀವನದಲ್ಲಿ ಪ್ರತಿಯೊಂದು ವಿಷಯವನ್ನು ಧನಾತ್ಮಕವಾಗಿಯೇ ಚಿಂತಿಸಿರಿ.**





# ತೈತ್ತಿರೀಯೋಪನಿಷತ್

**ಬರಹ: ಪಿ. ವೆಂಕಟರಮಣ ಆಚಾರ್ಯ, ಉಡುಪಿ** **ಪ್ರವಚನ:ಬನ್ನಂಜೆ ಗೋವಿಂದಾಚಾರ್ಯ**

ಓಂ ಶಾಂತಿಃ ಶಾಂತಿಃ ಶಾಂತಿಃ

ಓಂಕಾರದ ಎಂಟು ಅವಸ್ಥೆಗಳಿಗೆ ಎಂಟು ಭಗವದ್ರೂಪಗಳಿವೆ. ವಿಶ್ವ, ತೈಜಸ, ಪ್ರಾಜ್ಞ, ತುರ್ಯ, ಆತ್ಮ, ಅಂತರಾತ್ಮ, ಪರಮಾತ್ಮ, ಜ್ಞಾನಾತ್ಮ. ಓಂಕಾರದ ಎಂಟು ಅಕ್ಷರಗಳ ಪ್ರತಿಪಾದ್ಯ ದೇವತೆಗಳು ಕೃಷ್ಣ, ರಾಮ, ನರಸಿಂಹ, ವರಾಹ, ಪರಂಜ್ಯೋತಿ, ಪರಂಬ್ರಹ್ಮ, ವಿಷ್ಣು, ವಾಸುದೇವ, ಎಲ್ಲಾ ಗುಣಗಳಿಂದ ತುಂಬಿರುವ ತತ್ವ ಓಂ. ಓಂ ಅಂದರೆ ಅ+ಉ+ಮ. ಅ ಅಂದರೆ ಆಪ್ತಿ, ಉ ಎಂದರೆ ಉತ್ತಮ, ಮ ಎಂದರೆ ಜ್ಞಾನ. ಯಾವನಲ್ಲಿ ಉತ್ತಮವಾದ ಜ್ಞಾನವಿದೆಯೋ ಅದು ಓಂ. ಇಡೀ ಮಾಂಡೂಕೊಪನಿಷತ್ತನ್ನು ಇಲ್ಲಿ ಹೇಳುತ್ತಾರೆ. ಇಂತಹ ಭಗವಂತನನ್ನು ಮೂರು ನಾಮಗಳಿಂದ ಕರೆಯುತ್ತಾರೆ. ಶಾಂತಿ, ಶಾಂತಿ, ಶಾಂತಿ ಎಂದು. ಶಾಂತಿ ಭಗವಂತನ ಹೆಸರು. ಶ್+ಅಂತ+ಇ=ಶಾಂತಿ. ಶ್ ಅಂದರೆ ಸುಖ. ಅಂತ ಅಂದರೆ ಕೊನೆ. ಇ ಅಂದರೆ ಜ್ಞಾನ. ಶಾಂತಿ ಅಂದರೆ ಜ್ಞಾನಾನಂದ ಸ್ವರೂಪ. ಅವನು ಜ್ಞಾನಾನಂದ ಸ್ವರೂಪ ಎಂದು ಮೂರು ಬಾರಿ ಹೇಳುತ್ತಾರೆ. ಮೂರು ವೇದಗಳಲ್ಲೂ ಇವನ್ನನ್ನೇ ಹೇಳುತ್ತಾರೆ ಎಂದು ತಿಳಿಸುವುದಕೋಸ್ಕರ ಶಾಂತಿ ಮಂತ್ರದ ಕೊನೆಯಲ್ಲಿ ಮೂರು ಬಾರಿ ಶಾಂತಿ ಶಾಂತಿ ಶಾಂತಿ ಎಂದು ಹೇಳುತ್ತಾರೆ.

ಶಾಂತಿ ಎಂದರೆ ಮೋಕ್ಷ ಎಂದು ಅರ್ಥ ಎಲ್ಲಿ ನಮಗೆ ಪರಿಪೂರ್ಣವಾದ ಜ್ಞಾನವಿದೆಯೋ ಅದೇ ಶಾಂತಿ. ಎಲ್ಲಿ ಪರಿಪೂರ್ಣವಾದ ಸುಖವಿದೆಯೋ ಅದೇ ಶಾಂತಿ ಅಲ್ಪ ಸುಖ ದುಃಖದ ಬೆನ್ನು ಹತ್ತಿ ಬರುವಂತಹುದ್ದು. ಪರಿಪೂರ್ಣವಾದ ಜ್ಞಾನದಿಂದ ಬರುವ ಪೂರ್ಣ ಸುಖ ನಿರಂತರವಾದುದು. ಅಂತ ಜ್ಞಾನ ಪೂರ್ಣತೆಯನ್ನು ಪಡೆಯಲಿ ಎಂದು ಋಷಿಗಳು ಪ್ರಾರ್ಥಿಸುತ್ತಾರೆ. ಶಾಂತಿ ಎಂಬುವುದಕ್ಕೆ ಭಗವಂತನಿಗೆ ಮೂರು ರೂಪಗಳಿವೆ ಎನ್ನುವ ಅರ್ಥವೂ ಇದೆ. ಅದಕ್ಕಾಗಿ ಮೂರು ಬಾರಿ ಶಾಂತಿ ಶಾಂತಿ ಶಾಂತಿ ಎಂದು ಹೇಳುತ್ತಾರೆ. ಮೊದಲನೆ ಶಾಂತಿ ಅಂದರೆ ಅಚ್ಯುತ ಎರಡನೇ ಶಾಂತಿ–ಅನಂತ ಮೂರನೇಶಾಂತಿ ಗೋವಿಂದ ರೂಪ ಪರಮಾತ್ಮನನ್ನು ಹೇಳುತ್ತದೆ. ಪೂಜೆ, ಜಪ, ಮುಗಿಸುವಾಗಲೂ ನಾವು ಅಚ್ಯುತ ಆಂತ ಗೋವಿಂದ ಎಂದು ಸ್ಮರಿಸುತ್ತೇವೆ. ಇದನ್ನೇ ಇಲ್ಲಿ ಶಾಂತಿ, ಶಾಂತಿ, ಶಾಂತಿಃ

ಪುಟ 30ನ್ನು ನೋಡಿ

**ಅತಿಥಿ ಸತ್ಕಾರವನ್ನು ತಪ್ಪದೆ ನಡೆಸಿರಿ.**

# ತ್ರೈಲೋಕ್ಯಾಚಾರ್ಯರ ಲೋಕಮಾನ್ಯವಾದ ದಿನಚರಿ

–ಅನಂತಕೃಷ್ಣಾಚಾರ್ಯ,ಉಡುಪಿ

ಆಚಾರ್ಯ ಶ್ರೀಮಧ್ವರು ಶ್ರೀಹರಿಗೆ ಕುಂದಿಲ್ಲದ ಪೂಜೆಯನ್ನು ಸಮರ್ಪಿಸಿ ಬಳಿಕ ಆತನಿಗರ್ಪಿಸಿದ ಪ್ರಸಾದರೂಪವಾದ ಗಂಧವನ್ನು ಎದೆ–ತೋಳು–ಹೆಗಲುಗಳಿಗೆ ಪೂಸಿಕೊಂಡವರಾಗಿ, ರೇಶಿಮೆಯ ಚಂದದ ಪಟ್ಟೆಯನ್ನುಟ್ಟು, ಮುಗುಳು ನಗೆಯ ಮುಖಚಂದ್ರದಿಂದ ಶೋಭಿಸುತ್ತಾ ದೇವತೆಗಳ–ಮುನಿಗಳ–ಮನುಜರ ಕಣ್ಣಿಗೆ ಹಬ್ಬವಾದರು.

ಅನಾಯಾಸವಾಗಿ ದೊರಕಿದ ಉತ್ತಮವಾದ ಹಾಲನ್ನವನ್ನು ಹರಿಯ ಪರಮಭಕ್ತರಾದ, ವೇದಾರ್ಥ ಚಿಂತನೆಯಲ್ಲಿ ನಿಪುಣರಾದ ಆಚಾರ್ಯರು 'ಸಕಲ ಜಗದೊಡೆಯನಾದ ಶ್ರೀಹರಿಯು ಪ್ರೀತನಾಗಲಿ' ಎಂದು ಸದಾ ಚಿಂತಿಸುತ್ತ ಉಂಡರು. ವೇದವಿದರ ಚಿಂತನೆಯ ಕ್ರಮವೇ ಹೀಗಷ್ಟೆ. ಅವರು ಎಂದಿಗೂ ಭಗವಂತನ ಪ್ರೀತಿಗಾಗಿಯೆ ಎಲ್ಲವನ್ನು ಆಚರಿಸುವರು.

ಭಿಕ್ಷಾಸ್ವೀಕಾರ (ಯತಿಭೋಜನ)ವನ್ನು ಮುಗಿಸಿ ಕೈತೊಳೆದು ಆಚಮನಾದಿಗಳನ್ನು ಪೂರೈಸಿ ಏಳುವುದರೊಳಗೆ ಇತ್ತ ಶಿಷ್ಯರು ಗುರುಗಳಿಗೆ ಕುಳಿತುಕೊಳ್ಳಲು ತೆಳುಬಟ್ಟೆ ಹಾಸಿದ ಉಣ್ಣೆಯ ಕಂಬಳಿಯ ಹಾಸನ್ನು ಹಾಸಿ ಅಣಿಗೊಳಿಸಿದ್ದರು. ಸುತ್ತ ಹಿರಿಯ ವಿದ್ವಾಂಸರ ಸಭೆ ಸೇರಿತ್ತು. ಆಚಾರ್ಯರು ಆ ಸಭೆಗೆ ಅಲಂಕಾರಪ್ರಾಯರಾಗಿ ಶೋಭಿಸುತ್ತ ಬಗೆ ಬಗೆಯ ವಿದ್ಯೆಗಳ ಸೊಬಗಿನಿಂದ ವಿದ್ವಾಂಸರ ಗಡಣವನ್ನು ಮುದಗೊಳಿಸಿದರು.

ಆಚಾರ್ಯರ ಪ್ರಿಯಶಿಷ್ಯನೊಬ್ಬ ದೂರದಲ್ಲಿ ನಿಂತು ಅವಕಾಶಕ್ಕಾಗಿ ವಿನಮ್ರವಾಗಿ ನಿಂತಿದ್ದವನು ಗುರುಗಳ ಹುಬ್ಬಿನ ಹಾರಿಕೆಯಿಂದ ತನ್ನ ಸರದಿಯನ್ನರಿತು ಹತ್ತಿರ ಬಂದು, ಉಸಿರು ತಾಕದಂತೆ ತನ್ನ ಕೆಂಪಾದ ಕೈಗಳನ್ನು ಬಾಯಿಗೆ ಅಡ್ಡವಾಗಿ ಹಿಡಿದು ಒಡನೆಯೆ ಅವರ ಕಿವಿಯಲ್ಲಿ ಏನೋ ಗುಟ್ಟುನ್ನೊರೆದ. ಆಚಾರ್ಯರ ಮುಗುಳುನಗು–ಅರಳುಗಣ್ಣು ಅವನ ಗುಟ್ಟಿಗೆ ಉತ್ತರವಾಗಿತ್ತು.

ಎಲ್ಲಾ ಭಾಷೆಗಳ ಮಾತೃಭಾಷೆಯಾದ ಸಂಸ್ಕೃತವನ್ನು ಕಲಿಯಿರಿ.



ಇತ್ತ ತಮ್ಮ ನೆಚ್ಚಿನ ಗುರುಗಳನ್ನು ಕಣ್ತುಂಬ ಕಾಣಬೇಕೆಂಬ ಹಂಬಲದಿಂದ ಕಾಯುತ್ತಿದ್ದ ಗೃಹಸ್ಥರು ಆಚಾರ್ಯರಿಗೆ ನಮಸ್ಕರಿಸಿ ಸ್ವಲ್ಪದೂರದಲ್ಲಿ ನಿಂತಿದ್ದ ಜನಸಂದಣಿಯನ್ನು ದಾಟಿ ತಾಮುಂದು ತಾಮುಂದು ಎಂದು ಸ್ಪರ್ಧೆಯಿಂದಲೋ ಎಂಬಂತೆ ಆಚಾರ್ಯರ ಮೊದಲ ಸೇವೆಗಾಗಿ ಮುನ್ನುಗ್ಗಿ ಬಂದು ಗುರುಗಳ ಪಾದಕ್ಕೆರಗಿದರು. 'ಬನ್ನಿ, ಕೂಡಿ' ಎಂದು ಆಚಾರ್ಯರಿಂದ ಸತ್ಕೃತರಾದ ಆ ಗೃಹಸ್ಥ ಸಮೂಹ ನಾನಾ ನಾಡಿನಿಂದ ಬಂದವರು. ಈಗಾಗಲೆ ಆಚಾರ್ಯರ ಬಗ್ಗೆ ಸಾಕಷ್ಟು ಕೇಳಿ ತಿಳಿದವರು. ಆದರೆ ಹಿಂದೆ ತಾವು ಕೇಳಿದ ಗುಣಗಳಿಗಿಂತಲೂ ನೂರಾರು ಪಟ್ಟು ಮಿಗಿಲು ಗುಣವಂತರಾದ ಆಚಾರ್ಯರನ್ನು ಕಣ್ಣಾರೆ ಕಂಡು ಬೆರಗಾಗಿ ಕೈಮುಗಿದು ನಿಂತರು. ಆಚಾರ್ಯರಿಂದ ಆಶೀರ್ವಾದವನ್ನು ಪಡೆದು ಮನತುಂಬ ಆಚಾರ್ಯರನ್ನು ತುಂಬಿಸಿಕೊಂಡು ಇನ್ನಷ್ಟು ಹೆಚ್ಚಿನ ಭಕ್ತಿಯುಳ್ಳವರಾಗಿ ಮರಳಿದರು.

ಆಚಾರ್ಯರ ಶಿಷ್ಯ ಸಮೂಹವೂ ಗುರುಗಳಷ್ಟೇ ಶಿಸ್ತು ಬದ್ಧವಾಗಿತ್ತು. ಭೋಜನ ಮುಗಿಸಿದ ಕೂಡಲೆ ಸಮಯವನ್ನು ಹಾಳು ಮಾಡದೆ ಹಿಂದಿನ ಪಾಠವನ್ನು ಚಿಂತನ–ಮಂಥನಗಳಿಂದ ಗಟ್ಟಿ ಮಾಡುತ್ತಿತ್ತು.

ತಮ್ಮನ್ನು ಕಾಣಲು ಬಂದಿದ್ದ ಗೃಹಸ್ಥ ಸಮೂಹವನ್ನು ಅನುಗ್ರಹಿಸಿದ ಆಚಾರ್ಯರು ಪ್ರವಚನಕ್ಕೆ ಸಿದ್ಧರಾದರು. ಕೂಡಲೆ ಆಪ್ತ ಶಿಷ್ಯನೊಬ್ಬನು ಹಿಂದಿನ ಪಾಠವನ್ನೇ ಗಟ್ಟಿ ಮಾಡುತ್ತಿದ್ದ ಶಿಷ್ಯ ಸಮೂಹವನ್ನು ಕುರಿತು 'ಸಾಕು ಸಾಕು ಅನುವಾದ, ಮತ್ತೆ ಉರು ಹೊಡೆಯಬಹುದು. ಗುರುಗಳು ಪ್ರವಚನಕ್ಕೆ ತೊಡಗಲಿದ್ದಾರೆ. ಎಲ್ಲವನ್ನು ಬಿಟ್ಟು ಬೇಗ ಬನ್ನಿ' ಎಂದು ಎಚ್ಚರಿಸಿದ.

ಶಿಷ್ಯ ಸಮೂಹ ಕೂಡಲೆ ಪ್ರವಚನಕ್ಕೆ ಅಣಿಯಾಯಿತು. ಬಳಿಕ ಬಂದ ಆಚಾರ್ಯರು ಎತ್ತರವಾದ, ತಮಗಾಗಿಯೆ ಶಿಷ್ಯರು ಸಿದ್ಧಪಡಿಸಿದ್ದ ಆಸನದಲ್ಲಿ ಕುಳಿತು ಪ್ರವಚನವನ್ನು ಪ್ರಾರಂಭಿಸಿದರು. ನೆರದಿದ್ದ ಶಿಷ್ಯ ಸಮೂಹ, ಜನಸಮೂಹ ಸರ್ವಜ್ಞರಾದ ವೇದವ್ಯಾಸರಂತೆ ಪ್ರವಚನದಿಂದ ಬೆಳಗುತ್ತಿರುವ ಶ್ರೀಮಧ್ವರನ್ನು ಎವೆಯಿಕ್ಕದೆ ನಿರಂತರ ನೋಡುತ್ತ ಮೈಮರೆಯಿತು. ಆ ಮಂದಿಗೆ ಹೊತ್ತು ಹೋದದ್ದೇ ಗೊತ್ತಾಗಲಿಲ್ಲ.

ಸೂರ್ಯ ಮೂಡುವಾಗ ಹೇಗೆ ಕೆಂಪಾಗಿ ಅನುರಾಗವನ್ನು ಹೊತ್ತಿದ್ದನೋ

ರಾಮಾಯಣ–ಮಹಾಭಾರತ–ಭಾಗವತವನ್ನು ಕೇಳುತ್ತಿರಿ, ಓದುತ್ತಿರಿ.

ಅಂತೆಯೇ ಮುಳುಗುವಾಗಲೂ ಕೆಂಪಾಗಿ, ಕಣ್ಣುಗಳಿಗೆ ಹಿತವಾಗಿ ಆಕಾಶವನ್ನು ಆಶ್ರಯಿಸಿದವನಾಗಿ ಮುಳುಗಿಸಿದ. ಇದೊಂದು ಸಾಧಕನ ಸಾಧನೆಯಂತಿತ್ತು. ಯಾರು ಎತ್ತರದಲ್ಲಿರುವ ಹರಿಪದವನ್ನು ಆಶ್ರಯಿಸಿದ್ದಾರೋ ಅವರಿಗೆ ಆಪತ್ತು-ಸಂಪತ್ತುಗಳಲ್ಲಿ ಏನೂ ಬದಲಾವಣೆಯಾಗದು ಎಂಬುದನ್ನು ಮನದಟ್ಟು ಮಾಡುವಂತಿತ್ತು.

ಆಚಾರ್ಯರು ಸೂರ್ಯಾಸ್ತದ ವೇಳೆಗೆ ಪ್ರವಚನವನ್ನು ಕೊನೆಗೊಳಿಸಿದರು. ಮಿಂದು ಮಡಿಯುಟ್ಟು ಸಂಜೆಯ ಧ್ಯಾನದ ವೇಳೆಗೆ ಗುಣಪೂರ್ಣನಾದ, ಅಸುರ-ಸುರ-ನರರಿಂದ ಭಿನ್ನನಾದ, ಪಂಚಭೂತಗಳೇ ಮುಂತಾದುವುಗಳಲ್ಲಿ ತುಂಬಿದ ಸರ್ವಸ್ವಾಮಿಯಾದ ಶ್ರೀಹರಿಯನ್ನು ಧ್ಯಾನಿಸಿದರು.

ಆಚಾರ್ಯರೊಡನೆ ಇದ್ದ ಬ್ರಾಹ್ಮಣ ಸಮೂಹವು ಸಂಜೆಯ ಸಂಧ್ಯಾವಂದನೆಯನ್ನು ಸಕಾಲದಲ್ಲಿ, ಶಾಸ್ತ್ರದ ವಿಧಿ-ವಿಧಾನಗಳಂತೆ ಆಚರಿಸಿತು. ಸೂರ್ಯನಲ್ಲಿ ನೆಲೆಸಿರುವ ಮೂರುಲೋಕದ ಸ್ರಷ್ಟಾರನಾದ ನಾರಾಯಣನನ್ನು ಹಗಲಿರುವಾಗಲೆ ಪ್ರಾರಂಭಿಸಿ ನಕ್ಷತ್ರದ ಬೆಳಕು ಬೆಳಗುವವರೆಗೂ ಚಿಂತಿಸಿತು. ಅಗ್ನಿಹೋತ್ರಿಗಳು ಗಾಯತ್ರೀಶಬ್ದವಾಚ್ಯನಾದ ಹರಿಯ ಪ್ರೀತಿಗಾಗಿ ಅಗ್ನಿಹೋತ್ರವನ್ನಾಚರಿಸಿದರು.

ರಾತ್ರಿ ಚಂದ್ರೋದಯವಾಯಿತು. ಭಗವಂತನ ಧ್ಯಾನ-ಜಪ ಮುಂತಾದ ಅನುಷ್ಠಾನಗಳನ್ನು ಪೂರೈಸಿದ ಆಚಾರ್ಯರು ಭಾಗವತದ ಪ್ರವಚನದಲ್ಲಿ ತೊಡಗಿದರು. ಚಂದ್ರ ತನ್ನ ತಂಪಾದ ಕಿರಣಗಳಿಂದ ಆಕಾಶವನ್ನು ಪ್ರಕಟಗೊಳಿಸಿದ. ಆಚಾರ್ಯರು ಹಿತವಾದ, ತಂಪಾದ ಮಾತುಗಳಿಂದ ಕೃಷ್ಣನ ಸ್ವರೂಪವನ್ನು ಚೆನ್ನಾಗಿ ಪ್ರಕಟಗೊಳಿಸಿದರು. ಇಷ್ಟೇ ವ್ಯತ್ಯಾಸ. ಆಚಾರ್ಯರು ಆನಂದಾದಿ ಅನಂತಗುಣ ಪರಿಪೂರ್ಣನಾದ ಕೃಷ್ಣನನ್ನು ತಮ್ಮ ಮಾತಿನ ಮೂಲಕ ಪ್ರಕಟಗೊಳಿಸಿದರೆ ಚಂದ್ರನು ಕೇವಲ ಶಬ್ದವೆಂಬ ಒಂದೇ ಗುಣವುಳ್ಳ ಜಡವಾದ ಆಕಾಶವನ್ನು ಪ್ರಕಟಗೊಳಿಸಿದ.

ಚಂದ್ರನು ನಡುನೆತ್ತಿಯವರೆಗೆ ಬರುವವರೆಗೂ ಆಚಾರ್ಯರ ಪ್ರವಚನ ಸಾಗಿತ್ತು. ಬಳಿಕ ಪ್ರವಚನ ಮುಗಿಸಿ ವಿಶ್ರಾಂತಿಗಾಗಿ ತೆರಳಿದರು.

ಇದು ತ್ರೈಲೋಕ್ಯಾಚಾರ್ಯರ ಲೋಕಮಾನ್ಯವಾದ ದಿನಚರಿಯಾಗಿತ್ತು.

**ಇಂದ್ರಿಯಗಳೆಂಬ ಕುದುರೆಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನಿಸಿ.**





# ಶ್ರೀವಿಷ್ಣುಪುರಾಣ

## ಪೃಥುವನ್ನು ಪಡೆದು ವೇನ ಸ್ವರ್ಗ ಸೇರಿದ !

-ಸ್ಫೂರ್ತಿ

ಪೃಥುವಿನಂತಹ ಸತ್ಪುತ್ರನನ್ನು ಪಡೆದದ್ದರಿಂದ ದುಷ್ಟನಾದ ವೇನನು ಸ್ವರ್ಗವನ್ನು ಸೇರಿದನೆಂದು ವಿಷ್ಣುಪುರಾಣ ತಿಳಿಸುತ್ತದೆ.

**ಸತ್ಪುತ್ರೇಣೈವ ಜಾತೇನ ವೇನೋಽಪಿ ತ್ರಿದಿವಂ ಯಯೌ ।**
**ಪುನ್ನಾಮ್ನೋ ನರಕಾತ್ ತ್ರಾತಃ ಸುತೇನ ಸುಮಹಾತ್ಮನಾ ॥** (ವಿ.ಪು 13-42)

(ಸತ್ಪುತ್ರನು ಹುಟ್ಟಿದ್ದರಿಂದಲೆ ವೇನನೂ ಸ್ವರ್ಗವನ್ನು ಸೇರಿದನು. ಮಹಾತ್ಮನಾದ ಪುತ್ರನಿಂದ 'ಪುತ್' ಎಂಬ ಹೆಸರುಳ್ಳ ನರಕದಿಂದ ರಕ್ಷಿಸಲ್ಪಟ್ಟಿತಷ್ಟೆ.)

ಇದೊಂದು ನಂಬಲಸಾಧ್ಯವಾದ ಸಂಗತಿ. ದುಷ್ಟರಲ್ಲಿ ಅತ್ಯಂತ ದುಷ್ಟನಾದ ವೇನನು ಸ್ವರ್ಗವನ್ನು ಪಡೆಯುವುದಾದರೂ ಹೇಗೆ ಸಾಧ್ಯ?

ಭವಿಷ್ಯತ್ ಪುರಾಣ ತಿಳಿಸುವಂತೆ 'ನಾನೇ ದೇವರೆಂದು ಜಗತ್ತಿನಲ್ಲಿ ಮೊದಲ ಬಾರಿಗೆ ಡಂಗುರ ಹೊಡೆಸಿ ಸಾರಿದವನೆ ವೇನ. ಇವನ ಸಿದ್ಧಾಂತವನ್ನೇ ಅಸುರರು, ರಾಕ್ಷಸರು, ಪಿಶಾಚ ಮುಂತಾದವರು ಸ್ವೀಕರಿಸಿ ಗಟ್ಟಿ ಮಾಡಿಕೊಂಡರಂತೆ. ಮುಂದೆ ಪೃಥು ಚಕ್ರವರ್ತಿ ಈ ವೇನನ ದುಷ್ಟ ಸಿದ್ಧಾಂತವನ್ನು ನಾಶಗೊಳಿಸಿದನು. ಈ ಸಿದ್ಧಾಂತವೇ ವೈವಸ್ವತ ಮನ್ವಂತರದ ಇಪ್ಪತ್ತೆಂಟನೆ ಕಲಿಯುಗದಲ್ಲಿ ಕ್ರೋಧವಶರೆಂಬ ದೈತ್ಯರಿಂದ ಮತ್ತೆ ಪ್ರಚುರಗೊಳ್ಳುತ್ತದೆಂದು ಅದೇ ಪುರಾಣ ಭವಿಷ್ಯ ನುಡಿದಿದೆ. ವೇನನು ಇಂತಹ ದುಷ್ಟ ಸಿದ್ಧಾಂತಕ್ಕೆ ನಾಂದಿ ಹಾಡಿ ಅಂಧಂತಮಸ್ಸನ್ನು ಹೊಂದಿದನೆಂದು ತಿಳಿಸಿದೆ.

ಹೀಗಿರುವಾಗ ವೇನನು ಸ್ವರ್ಗಕ್ಕೆ ಹೋದನೆಂಬ ವಿಷ್ಣುಪುರಾಣದ ಮಾತನ್ನು ನಂಬುವುದೆಂತು? ಭವಿಷ್ಯತ್‌ಪುರಾಣ ಹಾಗೂ ವಿಷ್ಣುಪುರಾಣ ಹೀಗೇಕೆ ವಿರುದ್ಧವಾಗಿ ತಿಳಿಸುತ್ತಿವೆ? ದುಷ್ಟನಿಗೆ ಸ್ವರ್ಗವಾದರೂ ಹೇಗೆ?

ಸರಿಯಾಗಿ ಅರ್ಥವಾಗುವವರೆಗೆ ಇಂತಹ ಗೊಂದಲಗಳು ಸಹಜ.

**ಸತ್ಯ, ಪ್ರಿಯ ಮತ್ತು ಹಿತ ನುಡಿಗಳು ನಿಮ್ಮ ಜೀವನದಲ್ಲಿ ಹಾಸುಹೊಕ್ಕಾಗಿರಲಿ.**

ತ್ರೈಲೋಕ್ಯಾಚಾರ್ಯರಾದ ಶ್ರೀಮಧ್ವರು ಈ ಗೊಂದಲವನ್ನು 'ಭಾಗವತ ತಾತ್ಪರ್ಯ'ದಲ್ಲಿ ಬಹಳ ಸುಂದರವಾಗಿ ಪರಿಹರಿಸಿದ್ದಾರೆ.

ವೇನನಲ್ಲಿ ಸಾತ್ವಿಕ, ರಾಜಸ, ತಾಮಸವೆಂಬ ಮೂರು ಅಂಶಗಳಿತ್ತು. ಅವುಗಳಲ್ಲಿ ಸಾತ್ವಿಕಾಂಶವೇ ಪೃಥುಚಕ್ರವರ್ತಿಯಾಗಿ ಪ್ರಕಟಗೊಂಡಿತು. ರಾಜಸಾಂಶ ಸ್ವರ್ಗವನ್ನು ಸೇರಿತು. ತಾಮಸಾಂಶವೇ 'ಬೇಡ' ಜಾತಿಯಾಯಿತು. ನಾಲ್ಕನೆಯವನಾದ ಸಾಕ್ಷಾತ್ ವೇನ ಅಂಧಂತಮಸ್ಸನ್ನು ಸೇರಿದನು ಎಂಬುದು ಆಚಾರ್ಯರು ಕೂರ್ಮ, ಗರುಡ ಪುರಾಣ ವಚನಗಳ ಆಧಾರದಿಂದ ನೀಡಿದ ಸುಂದರವಾದ ವಿವರಣೆ.

ಆದರೂ ಪೂರ್ಣಗೊಂದಲ ಪರಿಹಾರವಾಗುವುದಿಲ್ಲ. ವೇನನಲ್ಲಿದ್ದ ರಾಜಸ ಅಂಶವಾದರೂ ತಾಮಸ ಅಂಶದಿಂದ ಕೂಡಿದ್ದರಿಂದ ಸ್ವರ್ಗಪ್ರಾಪ್ತಿಯಾದರೂ ಹೇಗೆ? ವೇನನ ತೊಡೆಯನ್ನು ಋಷಿ-ಮುನಿಗಳು ಕಡೆದಾಗ ಮೊದಲು ಬಂದವನು 'ಬೇಡ', ಅಂದರೆ ಮೊದಲು ವೇನನಲ್ಲಿದ್ದ ತಾಮಸಾಂಶ ಹೊರಬಂದಂತಾಯಿತು. ಒಳಗೆ ಉಳಿದಿರುವುದು ಸಾತ್ವಿಕ, ರಾಜಸ ಅಂಶಗಳು ಮಾತ್ರ. ಬಳಿಕ ವೇನನ ಬಲಗೈಯನ್ನು ಕಡೆದರು. ಆಗ ಒಳಗಿದ್ದ ಸಾತ್ವಿಕಾಂಶ ಪೃಥುಚಕ್ರವರ್ತಿಯಾಗಿ ಹೊರ ಬಂತು. ಈಗ ಉಳಿದಿದ್ದ ಕೇವಲ ರಾಜಸಾಂಶ ಮಾತ್ರ ಸ್ವರ್ಗಸೇರಿತು. ಪೃಥುವಿನಂತಹ ಮಗನನ್ನು ಪಡೆದ ಪುಣ್ಯವು ವೇನನ ರಾಜಸಾಂಶವನ್ನು ಸ್ವರ್ಗಕ್ಕೇರಿಸಿತು.

ಪೃಥು ಹುಟ್ಟಿದ ಕೂಡಲೆ ಸಮುದ್ರ, ನದಿಗಳು ರೂಪತೊಟ್ಟು ರತ್ನದರಾಶಿಯನ್ನು ಹೊತ್ತು ಬಂದವು. ಅವನ ಪಟ್ಟಾಭಿಷೇಕಕ್ಕಾಗಿ ಎಲ್ಲ ನದಿಗಳು ಹಾಜರಾದವು. ಚತುರ್ಮುಖಬ್ರಹ್ಮಾ ಸಮಸ್ತ ದೇವ-ಋಷಿಗಳೊಡನೆ ಬಂದು ಪಟ್ಟಾಭಿಷೇಕಗೈದನು. ಸಮಸ್ತ ಸ್ಥಾವರ ಜಂಗಮಗಳೇ ಈ ಘಟನೆಗೆ ಸಾಕ್ಷಿಯಾದವು.

ಚತುರ್ಮುಖಬ್ರಹ್ಮನು ಪೃಥುವಿನ ಬಲಗೈಯಲ್ಲಿ ಶೋಭಿಸುತ್ತಿದ್ದ ಚಕ್ರಚಿಹ್ನೆಯನ್ನು ಕಂಡು ಈತನು ವಿಷ್ಣುವಿನ ಆವೇಶಾವತಾರವೆಂದು ತಿಳಿದು ಆನಂದಪಟ್ಟನು.

**ಹಸ್ತೇ ತು ದಕ್ಷಿಣೇ ಚಕ್ರಂ ದೃಷ್ಟ್ವಾ ತಸ್ಯ ಪಿತಾಮಹಃ ।**
**ವಿಷ್ಣೋರಂಶಂ ಪೃಥುಂ ಮತ್ವಾ ಪರಿತೋಷಂ ಪರಂ ಯಯೌ** ॥ (ವಿ.ಪು. 13-45)

ಸಾಮಾನ್ಯವಾಗಿ ಚಕ್ರವರ್ತಿಗಳಾಗುವ ಎಲ್ಲ ವ್ಯಕ್ತಿಗಳ ಕೈಯಲ್ಲಿ ಚಕ್ರಚಿಹ್ನೆ ಇರುತ್ತದೆಂದು ವಿಷ್ಣುಪುರಾಣ ತಿಳಿಸುತ್ತದೆ. ಇದು ಭಗವಂತನ ಸನ್ನಿಧಾನ ಸೂಚಕ. ಭಗವಂತನು ಶಂಖಚಕ್ರಗದಾಧಾರಿಯಾಗಿ ರಾಜರಾಜೇಶ್ವರ (ರಾಜ ರಾಜ)ರೂಪದಿಂದ

ನಿಮ್ಮನೇ ನಂಬಿ ಬದುಕುವ ಜನರನ್ನು ರಕ್ಷಿಸಿರಿ.



ಚಕ್ರವರ್ತಿಗಳಲ್ಲಿ ಸನ್ನಿಹಿತನಾಗಿರುವುದರಿಂದಲೆ ಅವರು ಸಮಸ್ತ ಭೂಮಂಡಲದ ಒಡೆತನವನ್ನು ಪಡೆಯುತ್ತಾರೆ.

ಪೃಥುವಿನಲ್ಲಿ ವಿಶೇಷವಾದ ಭಗವಂತನ ಅವೇಶವಿತ್ತು. ಆದ್ದರಿಂದಲೆ ಭಗವಂತನ ಅವತಾರವೆಂದೇ ವಿಷ್ಣುಪುರಾಣ ಕೊಂಡಾಡಿತು. ವಸ್ತುತಃ ಪೃಥು ಒಬ್ಬ ಸಾತ್ವಿಕ ಜೀವ. ಅವನಲ್ಲಿ ಭಗವಂತ 'ಪೃಥು' ಅಥವಾ ರಾಜರೂಪದಿಂದ ವಿಶೇಷವಾಗಿ ಆವಿಷ್ಟನಾಗಿದ್ದನೆಂದು ಉಳಿದ ಪುರಾಣಗಳು ತಿಳಿಸುತ್ತವೆ.

ಪೃಥುವು ವಿಧಿವತ್ತಾಗಿ ಧರ್ಮಜ್ಞರಿಂದ ಪಟ್ಟಾಭಿಷಿಕ್ತನಾದ. ಹಿಂದೆ ತಂದೆಯಾದ ವೇನನು ಯಾವ ಪ್ರಜೆಗಳನ್ನು ದುಃಖಗೊಳಿಸಿದ್ದನೋ ಆ ಎಲ್ಲರ ಮನವನ್ನು ಪೃಥುವು ಮುದಗೊಳಿಸಿದನು. ಹೀಗೆ ಪ್ರಜೆಗಳನ್ನು ರಂಜಿಸಿದ್ದರಿಂದಲೆ ಪೃಥುವನ್ನು ಪ್ರಜೆಗಳು 'ರಾಜ' ಎಂದು ಕರೆದರು. ಅಂದಿನಿಂದ ಮುಂದಕ್ಕೆ ಪ್ರಜಾಪಾಲಕರು 'ರಾಜ'ರೆಂದೇ ಪ್ರಖ್ಯಾತರಾದರು.

**(ಸಶೇಷ)**

ಪುಟ 24ರಿಂದ ಮುಂದುವರಿದುದು

ಎಂದು ಹೇಳಿದ್ದು. ಲೌಕಿಕವಾಗಿ ಹೇಳುವುದಾದರೆ ಶಾಂತಿ ಎಂದರೆ ತ್ರಿಕರಣಗಳಲ್ಲಿ ಶಾಂತಿ. ಕಾಯ(ದೇಹ) ವಾಚಾ ಮನಸ್ಸಿನಲ್ಲಿ ಶಾಂತಿ ಆಗಲಿ ಎಂದು ಹೇಳುವುದು. ಇದು ಅಮುಖ್ಯ ಅರ್ಥ. ಅಲ್ಲದೆ ತ್ರಿವಿಧ ಶಾಂತಿಗಳಿವೆ. ಅಧಿಭೂತ, ಅಧಿಯಜ್ಞ, ಆಧಿದೈವ. ಭೌತಿಕ ಪ್ರಪಂಚದಲ್ಲಿ ಶಾಂತಿ ತುಂಬಲಿ. ಆದಿದೈವಿಕವಾಗಿ ಆಕಾಶದಲ್ಲಿ ಶಾಂತಿ ತುಂಬಲಿ. ಸ್ವರ್ಗ ಭೂಮಿಯಲ್ಲಿ ಶಾಂತಿ ತುಂಬಲಿ. ಎರಡು ಕಾಲಿನ ಪ್ರಾಣಿಗಳಿಲ್ಲಿ ಶಾಂತಿ ತುಂಬಲಿ. ಈ ಜೀವರಲ್ಲಿ ಶಾಂತಿ ತುಂಬಿಲಿ. ನಾಲ್ಕು ಕಾಲಿನ ಪ್ರಾಣಿಗಳಲ್ಲಿ ಶಾಂತಿ ತುಂಬಲಿ. ಈ ಜೀವರಲ್ಲಿ ಶಾಂತಿ ತುಂಬಲಿ. ಅಥವಾ ದೈಹಿಕ, ಮಾನಸಿಕವಾಗಿ ಶಾಂತಿ ತುಂಬಲಿ. ಆದಿ, ವ್ಯಾದಿ, ಈತಿ ಭಾಧಾದಿಗಳು ದೂರವಾಗಿ ಭೂಮಿ, ಸ್ವರ್ಗ, ಅಂತರಿಕ್ಷದಲ್ಲಿ ಶಾಂತಿ ತುಂಬಲಿ. ಆದಿ ಎಂದರೆ ಚಿಂತೆ ಇರದೆ ಇರಲಿ, ವ್ಯಾಧಿ-ರೋಗ ರುಜಿನಗಳು ಬರದೆ ಇರಲಿ. ಈತಿ- ಬರಗಾಲ, ಕ್ಷಾಮಾದಿಗಳು ಬರದೆ ಇರಲಿ. ಹೀಗೆ ಶಾಂತಿ ಎಂಬ ಪದ ಬಹಳ ಅರ್ಥಗಳಲ್ಲಿ ಉಪಯೋಗಿಸಲ್ಪಟ್ಟಿದೆ. ಎಲ್ಲಾ ರೀತಿಯಿಂದಲೂ ಎಲ್ಲರಿಗೂ ಶಾಂತಿಯನ್ನು ಉಂಟು ಮಾಡಲಿ ಎಂದು ಭೃಗು ಹೇಳುತ್ತಾನೆ. ಭೃಗು ತಾನು ಸ್ವಯಂ ಶಾಂತಿಯನ್ನು ಪಡೆದು ಈ ಮಂತ್ರವನ್ನು ಸಾಕ್ಷತ್ಕರಿಸಿಕೊಂಡ. ಅಲ್ಲದೆ ತನ್ನ ಶಿಷ್ಯರಿಂದ ಶಾಂತಿ ಉಂಟಾಗಲಿ ಎಂದು ಅವರಿಗೆ ಪಾಠ ಹೇಳಿದ.

ಹೀಗೆ ಇಲ್ಲಿಗೆ ಶಾಂತಿ ಪಾಠ ಮಂತ್ರದ ವಿವರಣೆ ಮುಗಿಯಿತು. **(ಸಶೇಷ)**

ದೀನ-ದುಃಖಿತರಿಗೆ ನಿಮ್ಮಲ್ಲಿರುವುದನ್ನು ಕೊಡಿ.

# KPÀªÁl (vÁAvÀå ªÀÄoÀ)

## ²æÃ«µÀÄÚªÀÄÆwð zÉÃªÀgÀ PÀÄA¨sÁ©üµÉÃPÀ

~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

**ಇತ್ಥಂ ಸದ್ಭಿಃ ಸದ್ಭಿರರ್ಚ್ಯೋ ಧರಾಯಾಂ ಚಕ್ರೇ ವಾಸಂ ಶೇಷಶಯ್ಯೇ ಶಯಾನೇ।**
**ಗ್ರಾಮೇಃ ವಾತ್ಯೈಃ ಪಾವಿತೇ ಕಾಣ್ವತೀರ್ಥ್ಯೈಃ ಭಕ್ತಪ್ರೀತ್ಯಾ ಸನ್ಮತೇಽನೂನಭೋಧಃ॥**
**(ಶ್ರೀ ಮಧ್ವವಿಜಯ)**

(ಸಜ್ಜನರಿಂದ ಆರಾಸಧಿಲ್ಪಡುವ ಜಗದ್ಗುರು ಶ್ರೀ ಮಧ್ವಾಚಾರ್ಯರು ಶೇಷಶಾಯಿಯಾದ, ಆಶೇಷನಾದ ಶ್ರೀನಾರಾಯಣನ ಯೋಗನಿದ್ರೆಯ ಪರ್ವಕಾಲದಲ್ಲಿ ಕಣ್ವತೀರ್ಥಕ್ಕೆ ಸಂಬಂಧಿಸಿದ ಗಾಳಿಯಿಂದ ಪವಿತ್ರವಾದ ಗ್ರಾಮ್ಯ ಭಾಷೆಯಲ್ಲಿ ತಾಂತ್ಯ ಎಂದು ಕರೆಯಲ್ಪಡುವ "ಏಕವಾಟ" ಎಂಬ ಊರಿನ ಒಂದು ಮಠದಲ್ಲಿ ಚಾತುರ್ಮಾಸ್ಯ ವ್ರತವನ್ನು ಕೈಗೊಂಡರು)–

ಶ್ರೀನಾರಾಯಣ ಪಂಡಿತಾಚಾರ್ಯರು ಶ್ರೀಮಧ್ವವಿಜಯದಲ್ಲಿ ತಿಳಿಸಿರುವಂತೆ ಪರಮ ಪಾವನರಾದ ಶ್ರೀಮಧ್ವಾಚಾರ್ಯರು ಚಾತುರ್ಮಾಸ್ಯ ವ್ರತ ಆಚರಿಸಿದ ಏಕವಾಟ (ಆಕಾಲದ ತಾಂತ್ಯಮಠ, ಈಗಿನ ಕಾಸರಗೋಡು ಸಮೀಪದ ವರ್ಕಾಡಿ) ಕ್ಷೇತ್ರದ ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಜೀರ್ಣೋದ್ದಾರ ಕಾರ್ಯಗಳು ಯಥಾಶಕ್ತಿಯಾಗಿ ನಡೆದು ದಿನಾಂಕ ಮೇ 6 ಮತ್ತು 7 ರಂದು (ಅಕ್ಷಯತೃತೀಯಾದ ಪರ್ವಕಾಲದಲ್ಲಿ) ಶ್ರೀ ಮದಾಚಾರ್ಯರಿಂದ ನಾಲ್ಕು ಮಾಸ ಇಡೀ ಪೂಜೆಗೊಂಡ ವಿಶೇಷ ಸನ್ನಿಧಾನವುಳ್ಳ ಶ್ರೀ ವಿಷ್ಣುಮೂರ್ತಿ ದೇವರ ಪುನಃಪ್ರತಿಷ್ಠೆ ಹಾಗೂ ಕುಂಭಾಭಿಷೇಕಗಳು ನಡೆಯಲಿವೆ. ಈ ಪುಣ್ಯಕಾರ್ಯದಲ್ಲಿ ಭಗವದ್ಭಕ್ತರು ಭಾಗವಹಿಸಿ ಆಚಾರ್ಯರ ಹಾಗೂ ಕ್ಷೇತ್ರ ಸ್ವಾಮಿಯಾದ ಶ್ರೀ ವಿಷ್ಣುಮೂರ್ತಿ ದೇವರ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಅಪೇಕ್ಷಿಸುತ್ತೇವೆ.

**ಗಳಿಸಿದ ಹಣವನ್ನು ಕೇವಲ ವಿಲಾಸ ಜೀವನಕ್ಕಾಗಿಯೇ ಪೋಲು ಮಾಡದಿರಿ,**



### ಮಂಗಳೂರಿನಿಂದ ಹೊರಡುವ ಬಸ್ಸುಗಳ ವೇಳಾಪಟ್ಟಿ

ಸ್ಟೇಟ್ ಬ್ಯಾಂಕ್‌ನಿಂದ ತೌಡಗೋಳಿ: 9–00,11–35,2–10,4–45,7–45
ಜ್ಯೋತಿಯಿಂದ ತೌಡಗೋಳಿ: 8–00, 9–25, 9–55, 12–40,2–55, 5–10, 6–30,8–20,
ಜ್ಯೋತಿಯಿಂದ ನೆತ್ತಿಲಪದವು: 8–35,10–50,1–50,3–50,7–50
ಸ್ಟೇಟ್ ಬ್ಯಾಂಕ್‌ನಿಂದ ತೌಡುಗೋಳಿ: 7–00, 9–05, 11–30, 4–10, 6–30
ಸ್ಟೇಟ್ ಬ್ಯಾಂಕ್‌ನಿಂದ ನೆತ್ತಿಲಪದವು: 8–20, 12–45, 4–40
ಕಂಕನಾಡಿಯಿಂದ ನಾಟಿಕಲ್:8–00, 10–25, 1–25, 6–35
ಕಂಕನಾಡಿಯಿಂದ ನೆತ್ತಿಲಪದವು:8–10, 11–15, 2–40, 6–00

### ಮಂಗಳೂರಿನಿಂದ ವರ್ಕಾಡಿಗೆ ಮಾರ್ಗಸೂಚಿ




**ಬಂದ ಹಣದಲ್ಲಿ ಸ್ವಲ್ಪ ಭಾಗವನ್ನು ಧಾರ್ಮಿಕ ಕಾರ್ಯಕ್ಕಾಗಿ, ಬಡಬಗ್ಗರಿಗಾಗಿ ವಿನಿಯೋಗಿಸಿ.**
~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

ವಸಂತೋತ್ಸವದ ಪ್ರಯುಕ್ತ ವಿಶೇಷಲೇಖನ

# ಗುರುನಮನ

–ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ಶ್ರೀ ಪೇಜಾವರ ಮಠ

**ಶ್ರೀಮಧ್ವಸಿದ್ಧಾಂತ–ಸಮರ್ಥನೈಕದೀಕ್ಷಂ ಸದೈವಪ್ರವಚೋಽನುರಕ್ತಮ್।**
**ವಿದ್ಯಾತಪಃ ಸಿಂಧುಮುದಾರ–ವಿದ್ಯಾಮಾನ್ಯಂ ಗುರುಣಾಂ ಗುರುಮಾನನಾಮಿ॥**

ಶ್ರೀ ವಿದ್ಯಾಮಾನ್ಯ ಗುರುಗಳು ವೈಕುಂಠವಾಸಿಗಳಾದ ಏಕಾದಶೀ ದಿನದಲ್ಲಿಯೇ ಅವರ ಪಾರ್ಥಿವ ಶರೀರವನ್ನು ಪಲಿಮಾರಿಗೆ ಕಳುಹಿಸಿ ವಿಷಣ್ಣನಾಗಿ ಆಚಾರ್ಯರ ಸಿಂಹಾಸನದಲ್ಲಿ ಕುಳಿತುಕೊಂಡಾಗಸ್ಫುರಣೆಗೊಂಡ ಶ್ಲೋಕವಿದು. ಇದರಲ್ಲಿ ಗುರುಗಳ ವ್ಯಕ್ತಿತ್ವದ ಐದು ಮುಖಗಳು ನಿರೂಪಣೆಗೊಂಡಿದೆ. ಸಿದ್ಧಾಂತನಿಷ್ಠೆ, ಪ್ರವಚನದೀಕ್ಷೆ, ಅಪಾರಪಾಂಡಿತ್ಯ, ಅಖಂಡತಪಸ್ಸು, ಔದಾರ್ಯ ಇವೆ ಅವರ ವ್ಯಕ್ತಿತ್ವದ ಐದು ಮುಖಗಳು.

**"ಶ್ರೀಮಧ್ವಸಿದ್ಧಾಂತಸಮರ್ಥನೈಕದೀಕ್ಷಂ"–** ಆಚಾರ್ಯರ ಸಿದ್ಧಾಂತದ ಸಮರ್ಥನದಲ್ಲಿ ಅವರಿಗೆ ಯಾವಾಗಲೂ ದೀಕ್ಷೆ. ಆಚಾರ್ಯರ ಸಿದ್ಧಾಂತದ ಮೇಲೆ ಯಾವುದೇ ಅಕ್ಷೇಪ, ಆಹ್ವಾನಗಳು ಬಂದರೂ ಅದನ್ನು ಎದುರಿಸಲು ಅವರು ಯಾವಾಗಲೂ ಸಿದ್ದರು. ಅದಕ್ಕಾಗಿ ಎಷ್ಟು ದೂರವಾದರೂ ಹೋಗಿ ಎಂತಹ ಪಂಡಿತರಾಗಿದ್ದರೂ ಅವರನ್ನು ಎದುರಿಸಿ ಆಚಾರ್ಯರ ಸಿದ್ಧಾಂತವನ್ನು ಸಮರ್ಥಿಸುತ್ತಿದ್ದರು.

**"ಸದೈವ ಪ್ರವಚೋಽನುರಕ್ತಂ"–** ಪಾಠ ಪ್ರವಚನದಲ್ಲಿ ಯಾವಾಗಲೂ ಅವರಿಗೆ ಆಸಕ್ತಿ. ಚಿಕ್ಕ ಹುಡುಗನೇ ಆಗಲೀ, ವೃದ್ಧರಾದ ಜಿಜ್ಞಾಸುಗಳೇ ಆಗಲೀ, ಪ್ರೌಢವಿದ್ಯಾರ್ಥಿಯಿರಲಿ, ದಡ್ಡಹುಡುಗನಾಗಿರಲೀ ತನ್ನಲಿಗೆ ಬಂದವರಿಗೆಲ್ಲಾ ಪ್ರೀತಿ, ಸಹನೆಯಿಂದ ಅವರು ಪಾಠ ಹೇಳುತ್ತಿದ್ದರು. ಶಾಸ್ತ್ರಪ್ರವಚನವನ್ನು ಅವರು ಒಂದುದಿನವೂ ಬಿಟ್ಟವರಲ್ಲ. ತಮ್ಮ ಅನಾರೋಗ್ಯ ಅಶಕ್ತಿ, ವಾರ್ಧಕ್ಯದ ಸ್ಥಿತಿಯಲ್ಲಿಯೂ ಪಾಠವನ್ನು ಹೇಳುವ ಮತ್ತು ವಿದ್ಯಾರ್ಥಿಗಳಿಂದ ಅನುವಾದ ಮಾಡಿಸುವ ಜ್ಞಾನಕಾರ್ಯವನ್ನು ಕೊನೆಯವರೆಗೂ ಬಿಟ್ಟಿರಲಿಲ್ಲ.

**ಹೆಂಡತಿ ಮಕ್ಕಳಿಗೆ ಹಿತೋಪದೇಶವನ್ನು ಮಾಡುತ್ತಾ ಕುಟುಂಬವನ್ನು ಸಾಗಿಸುತ್ತಿರಿ.**



**"ವಿದ್ಯಾ ತಪಃ ಸಿಂಧುಂ"–** ಅವರು ಸುಜ್ಞಾನ ಹಾಗೂ ತಪಸ್ಸಿನ ಸಾಗರವೇ ಆಗಿದ್ದರು. ಅಪಾರ ಪಾಂಡಿತ್ಯ ಮತ್ತು ಶಾಸ್ತ್ರಪ್ರತಿಭೆಗಳು ಅಸಾಧಾರಣವಾಗಿರುವಂತೆ ಅವರ ಸದಾಚಾರನಿಷ್ಠೆ, ಬ್ರಹ್ಮಚರ್ಯ, ಶೀಲ, ಸೌಜನ್ಯಗಳೂ ಅನುಪಮಗಿದ್ದವು. ಅವರ ಜೀವನದಲ್ಲಿ ಒಂದೇ ಒಂದು ಕಪ್ಪು ಚುಕ್ಕೆಯೂ ಕಾಣಿಸಲಾರದು.

**"ಉದಾರ"–** ಅವರ ಔದಾರ್ಯವನ್ನು ಅನುಭವಿಸದ ಪಂಡಿತರಾಗಲೀ ವಿದ್ಯಾರ್ಥಿಗಳಾಗಲೀ, ಯಾರೂ ದೊರೆಯಲಾರರು. ವಿದ್ಯಾರ್ಥಿಗಳಿಗೆ, ವಿದ್ವಾಂಸರಿಗೆ ಅವರು ಕೊಡುಗೈ ದಾನಿಗಳು. ಅವರ ಮಹೋನ್ನತ ವ್ಯಕ್ತಿತ್ವವನ್ನು ಈ ಶ್ಲೋಕದಲ್ಲಿ ಸಂಗ್ರಹವಾಗಿ ಸೆರೆಹಿಡಿಯಲು ಪ್ರಯತ್ನಿಸಲಾಗಿದೆ. ಅವರು **"ಗುರುಣಾಂ ಗುರು"** ಗುರುಗಳಿಗೆ ಗುರುಗಳು. ಅನೇಕ ಮಠಾಧಿಪತಿಗಳಿಗೆ ಪಾಠಪ್ರವಚನವನ್ನು ಮಾಡಿ ಅವರನ್ನು ವಿದ್ವಾಂಸರನ್ನಾಗಿ ಸಿದ್ಧಪಡಿಸಿದ್ದಾರೆ. ನನ್ನಂತಹ ಅನೇಕ ಪೀಠಾಧಿಪತಿಗಳು ಇದಕ್ಕೆ ಸಾಕ್ಷಿಯಾಗಿದ್ದಾರೆ. ಗುರು ವಿದ್ಯಾಮಾನ್ಯರ ಪುಣ್ಯಸ್ಮರಣೆಯ ಸಂದರ್ಭದಲ್ಲಿ ಈ ಶ್ಲೋಕವನ್ನು ಶ್ರದ್ಧಾಂಜಲಿಯಾಗಿ ಸಕಲ ಸದ್ಭಕ್ತರ ಮುಂದಿಡುತ್ತಿದ್ದೇನೆ.

ಈ ಶ್ಲೋಕವು ದೀರ್ಘವಾದುದರಿಂದ ಇದನ್ನು ಪ್ರತಿದಿನ ಪಾರಾಯಣ ಮಾಡಲು ಕಠಿಣವಾಗಬಹುದೆಂದು ಜನರ ಅನುಕೂಲಕ್ಕಾಗಿ ಇನ್ನೊಂದು ಚಿಕ್ಕ ಶ್ಲೋಕವನ್ನೂ ಸಮರ್ಪಿಸುತ್ತಿದ್ದೇವೆ.

**ಅನವದ್ಯಾತ್ಮಚಾರಿತ್ರ್ಯಂವಾದಿಖದ್ಯೋತಭಾಸ್ಕರಮ್।**
**ವಿದ್ಯಾಮಾನ್ಯಗುರುಂವಂದೇ ವಿದ್ಯಾವಿದ್ಯೋತ ಭಾಸ್ವರಂ॥**

ಅವರ ಚಾರಿತ್ರ್ಯವು ಅತ್ಯಂತ ನಿರ್ಮಲ. ಶಾಸ್ತ್ರಾರ್ಥ ಚರ್ಚೆ ಮಾಡಲು ಬರುವ ವಾದಿಗಳು ಈ ಭಾಸ್ಕರನ ಮುಂದೆ ಮಿಣುಕುಹುಳಗಳು. ವಿದ್ಯೆಯೇ ಈ ಸೂರ್ಯನ ಪ್ರಭೆ. ಆದರಿಂದ ಇವರು ಪ್ರಕಾಶಮಾನರಾಗಿದ್ದಾರೆ.

**ಭಾರತೀಯ ಸಂಸ್ಕೃತಿ–ವಿದ್ಯೆಗಳನ್ನು ಕಲಿಯಲು ತೊಡಗಿರಿ.**